MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

ಸಂಪುಟ: 05 | ಸಂಚಿಕೆ: 28 | ಗುರುವಾರ : 13-11-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 28 | THURSDAY : 13-11-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಶ್ರದ್ಧೆಯಿಂದ ಕಲಿತು ಉನ್ನತ ಪದವಿಗಳನ್ನು ಪಡೆದು ಉತ್ತಮ ಜೀವನವನ್ನು ರೂಪಿಸಿಕೊಳ್ಳಿ: ಹಂಪಯ್ಯನಾಯಕ



ಯುವ ಮಾರ್ಗ ಸುದ್ದಿ

**ಮಾನ್ವಿ,ನ.12–** ಪಟ್ಟಣದ ಬಾಶುಮಿಯ ಸಾಹುಕಾರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 2025– 26ನೇ ಸಾಲಿನ ಬಿ.ಎ,ಬಿ.ಕಾಂ,ಬಿ.ಸಿ.ಎ, ಬಿ.ಎಸ್ಸಿ. ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ ಹಾಗೂ ಕಾಲೇಜಿನ ವಿವಿಧ ಘಟಕಗಳ ಉದ್ಘಾಟನಾ ಕಾರ್ಯಕ್ರಮಕ್ಕೆ ಶಾಸಕ ಹಂಪಯ್ಯನಾಯಕ ಚಾಲನೆ ನೀಡಿ ಮಾತನಾಡಿ, ಸರ್ಕಾರ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೂ ಕೂಡ ಉನ್ನತವಾದ ಶಿಕ್ಷಣ ದೊರೆಯಲ್ಲಿ ಎನ್ನುವ ಉದ್ದೇಶದಿಂದ ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಕಲಿಕೆಗೆ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸುತ್ತಿದೆ. ವಿದ್ಯಾರ್ಥಿಗಳು ಕಾಲೇಜಿನಲ್ಲಿ ಉಪನ್ಯಾಸಕರು ಹೇಳುವ ವಿಷಯಗಳನ್ನು ಶ್ರದ್ಧೆಯಿಂದ ಕಲಿತು ಉನ್ನತ ಪದವಿಗಳನ್ನು ಪಡೆದು ಉತ್ತಮ ಜೀವನವನ್ನು ರೂಪಿಸಿಕೊಳ್ಳುವಂತೆ ತಿಳಿಸಿದರು

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯರಾದ ಜೆ.ಎಲ್.ಈರಣ್ಣ, ಕಾಲೇಜಿನ ಸಿಬ್ಬಂದಿ ಕಾರ್ಯದರ್ಶಿ ಡಾ.ಸೈಯದ್ ಮಿನ್ಹಾಜ್ ಉಲ್ ಹಸನ್ , ನಯೋಪ್ರ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ್, ಪಂಚ ಗ್ಯಾರೆಂಟಿ ಯೋಜನೆಯ ತಾ. ಅಧ್ಯಕ್ಷರಾದ ಬಿ.ಕೆ.ಅಮರೇಶಪ್ಪ, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರಾದ ಡಿ.ಜೆ.ಕರ್ಕಿಹಳ್ಳಿ, ಆರ್.ವೆಂಕಯ್ಯ ಶೆಟ್ಟಿ , ಮಧುಕುಮಾರಿ ಪಾಂಡೆ, ಸಿದ್ದನಗೌಡ ಆಲ್ದಾಳ್, ಶಂಕರ್ ಜಗ್ಲಿ, ಬೀರಪ್ಪ ಬಲ್ಲಟಗಿ ಹಾಗೂ ಕಾಂಗ್ರೆಸ್ ಮುಖಂಡರಾದ ಖಾಲಿದ್ ಖಾದ್ರಿ , ಶಿವರಾಜ ಉಮಳಿಹೊಸೂರು ಮತ್ತು ಹೊನ್ನಪ್ಪ ಹೆಳವರ್ , ಉಪನ್ಯಾಸಕರಾದ ಬಸವರಾಜ ಸುಂಕೇಶ್ವರ, ಎಸ್. ಶಶಿಧರ್ ,ಬಸವರಾಜ ಕರಡಿಗುಡ್ಡ ,ಕಾಲೇಜಿನ ವಿವಿಧ ಘಟಕಗಳ ಸಂಚಾಲಕರು ಇದ್ದರು.

## 2,900 ಕಿಲೋಗ್ರಾಂ ಸ್ಫೋಟಕದಿಂದ ದೇಶದ ಹಲವೆಡೆ ವಿಧ್ವಂಸಕ ಕೃತ್ಯಕ್ಕೆ ಸ್ಕೆಚ್ ಹಾಕಿದ್ದ ಉಗ್ರರು



**ನವದೆಹಲಿ,ನ.12–** ರಾಷ್ಟ್ರ ರಾಜಧಾನಿ ದೆಹಲಿ ಗಡಿಗೆ ಹೊಂದಿಕೊಂಡಿರುವ ಫರೀದಾಬಾದ್‌ನಲ್ಲಿ ಪೊಲೀಸರು ವಶಪಡಿಸಿಕೊಂಡಿರುವ ಸ್ಫೋಟಕ ವಸ್ತುಗಳು, ದೇಶದ ವಿವಿಧೆಡೆ ವಿಧ್ವಂಸಕ ಕೃತ್ಯಕ್ಕೆ ಬಳಸಲು ಉಗ್ರರು ಸಂಚು ರೂಪಿಸಿದ್ದರು ಎಂಬುದು ಗೊತ್ತಾಗಿದೆ.

ಫರೀದಾಬಾದ್‌ನಲ್ಲಿ ನಡೆದ ದಾಳಿ ತಡೆ ಕಾರ್ಯಾ ಚರಣೆಯಲ್ಲಿ ಪೊಲೀಸರು ಹಾಗೂ ತನಿಖಾ ಸಂಸ್ಥೆಗಳು ಸುಮಾರು 2,900 ಕಿಲೋಗ್ರಾಂ ಸ್ಫೋಟಕ ಸಾಮಗ್ರಿ , ಆಧುನಿಕ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿವೆ.

ತನಿಖೆಯಿಂದ ಈ ವಸ್ತುಗಳು ರಾಷ್ಟ್ರದ ಹೃದಯ ಭಾಗದಲ್ಲೆ? ಬೃಹತ್ ದಾಳಿ ನಡೆಸುವ ಉದ್ದೇಶದ ಭಾಗವಾಗಿದ್ದವು ಎಂಬುದು ಸ್ಪಷ್ಟವಾಗಿದೆ.ಈ ಸಂಚು ಒಬ್ಬ ವೈದ್ಯರ ನಿವಾಸದಿಂದ ನೇರವಾಗಿ ಸಂಪರ್ಕ ಹೊಂದಿತ್ತು. ಶಿಕ್ಷಣ ಪಡೆದ ವ್ಯಕ್ತಿಗಳು ಉಗ್ರ ಚಟುವಟಿಕೆಯಲ್ಲಿ ತೊಡಗಿರುವುದು ತನಿಖಾ ಸಂಸ್ಥೆಗಳಿಗೆ ಹೊಸ ಸವಾಲು. ಅಧಿಕಾರಿಗಳ ಪ್ರಕಾರ, ಇದು ಹೊಸ ಮಾದರಿಯ ಉಗ್ರ ಚಟುವಟಿಕೆ ವೈಟ್ ಕಾಲರ್ ಜಿಹಾದ್ ಆಗಿದೆ.

ಹಾಗಾಗಿ ಫರೀದಾಬಾದ್ ಕೇವಲ ಕಾಕತಾಳೀಯ(2ನೇಪುಟಕ್ಕೆ)

## ಪ್ರಕೃತಿ ಚಿಕಿತ್ಸೆಯಿಂದ ಧೀರ್ಘಕಾಲೀನ ರೋಗಗಳಿಂದ ಮುಕ್ತಿ: ಪತಂಗೆ ಜಯವಂತರಾವ್



ಯುವ ಮಾರ್ಗ ಸುದ್ದಿ

**ರಾಯಚೂರು,ನ.12–** ರಾಷ್ಟೀಯ ಪ್ರಕೃತಿ ಚಿಕಿತ್ಸಾ ದಿನಾಚರಣೆ ಅಂಗವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆಯುಷ್ ಇಲಾಖೆ, ಭಾರತ ಸರ್ಕಾರದ ಆಯುಷ್ ಮಂತ್ರಾಲಯ, ಬೆಂಗಳೂರಿನ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ, ಕರ್ನಾಟಕದ ಉಜಿರೆಯ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನಗಳ ಮಹಾವಿದ್ಯಾಲಯ ಮತ್ತು ಚಿಕಿತ್ಸಾ ಇವರ ನೇತೃತ್ವದಲ್ಲಿ ಪ್ರಕೃತಿ ಚಿಕಿತ್ಸೆ ಮಾಹಿತಿ ಮತ್ತು ಚಿಕಿತ್ಸಾ ಶಿಬಿರವು ರಾಯಚೂರು ನಗರದ ರಾಯಚೂರು ಒಕ್ಕಲುತನ ಹುಟ್ಟುವಳಿ ಮಾರಾಟ ಹಾಗೂ ಸಂಸ್ಕರಣ ಸಹಕಾರ ಸಂಘದಲ್ಲಿ ನವೆಂಬರ್ 12ರಂದು ನಡೆಯಿತು.

ಸಂಘದ ಅಧ್ಯಕ್ಷರಾದ ಶ್ರೀ ಪತಂಗೆ ಜಯವಂತರಾವ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಪಂಚ ಭೂತಗಳಾದ ವಾಯು, ಅಗ್ನಿ, ಸೂರ್ಯ, ಚಂದ್ರ, ಭೂಮಿ ಮೂಲಕ ಪ್ರಕೃತಿ ಚಿಕಿತ್ಸಾ ಕಾರ್ಯ ಮಾಡುವುದರಿಂದ ರೋಗಿಯು ಧೀರ್ಘಕಾಲೀನ ರೋಗಗಳಿಂದ ಮುಕ್ತಿ ಹೊಂದಿ ಹೊಸ ಚೈತನ್ಯದಿಂದ ಜೀವನ ಸಾಗಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ತಾವು ಈ ಹಿಂದೆ ಪ್ರಕೃತಿ ಚಿಕಿತ್ಸೆಯನ್ನು ಪಡೆದುಕೊಂಡದ್ದು ಹೆಚ್ಚಿನ ಅನುಕೂಲವಾಗಿದೆ ಎಂದ ಅವರು, ಡಾ.ಕುಮಾರಿ ಸಮೃದ್ಧಿ ತಂದೆ ಸುನೀಲ್ ಬೆಂಗಳೂರು ಅವರು ಪ್ರಕೃತಿ ಚಿಕಿತ್ಸೆಯ ವೈದ್ಯಕೀಯ ಶಿಕ್ಷಣ ಪಡೆದು ಈ ಕಾರ್ಯಗಾರವನ್ನು ರಾಯಚೂರಲ್ಲಿ ಹಮ್ಮಿಕೊಂಡಿದ್ದಾರೆ ಎಂದು ತಿಳಿಸಿದರು.

ಕಾರ್ಯಗಾರದಲ್ಲಿ ಸಂಘದ ಎಲ್ಲಾ ನಿರ್ದೇಶಕರು, ಸಿಬ್ಬಂದಿ, ಕಾರ್ಮಿಕರು, ರೈತ ಸದಸ್ಯರು ಹಾಗೂ ಸುತ್ತಲಿನ ಗ್ರಾಮಗಳ ಮತ್ತು ನಗರವಾಸಿಗಳು ರಕ್ತದೊತ್ತಡ, ಸಕ್ಕರೆ ಇನ್ನಿತರ ಕಾಯಿಲೆಗಳ ಬಗ್ಗೆ ಉಚಿತವಾಗಿ ಆರೋಗ್ಯ ತಪಾಸಣೆ ಪ್ರಯೋಜನೆ ಪಡೆದುಕೊಂಡರು.

ಉಜಿರೆಯ ಎಸ್.ಡಿ.ಎಮ್.ಪ್ರಕೃತಿಕ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ವೈದ್ಯಾರಾದ ಡಾ.ಪವನ್ ಕೆ.ಎಸ್., ಡಾ.ಭಾರತ್, ಡಾ.ಮಾಣಿಕ್ಯ, ಡಾ.ಉಮೇಶ್ ಜಾದವ್, ಡಾ.ವೀರನಗೌಡ, ರವಿಶಂಕರ್, ರಮಾ ಪಾಟೀಲ್, ಡಾ.ನವ್ಯ ಹಾಗೂ ಸಂಘದ ಉಪಾಧ್ಯಕ್ಷರಾದ ಶಶಿಧರ ಪಾಟೀಲ್ ನಿರ್ದೇಶಕರಾದ ಮಲ್ಲನಗೌಡ ಪಾಟೀಲ್, ಶರಬಣಗೌಡ, ಶಂಕರರೆಡ್ಡಿ, ಪ್ರಧಾನ ವ್ಯವಸ್ಥಾಪಕರಾದ ಬಂದಯ್ಯಸ್ವಾಮಿ, ಸಹಾಯಕ ವ್ಯವಸ್ಥಾಪಕರಾದ ಜಗದೀಶ್ ಸ್ವಾಮಿ, ಲೇಕಪಾಲರಾದ ನರಸಿಂಹಪ್ಪ ಹಾಗೂ ಇನ್ನೀತರರು ಉಪಸ್ಥಿತರಿದ್ದರು.

## ರಾಜ್ಯ ಸಾರಿಗೆ ವ್ಯವಸ್ಥೆ ದೇಶಕ್ಕೆ ಮಾದರಿ: ಅರುಣಕುಮಾರ ಪಾಟೀಲ್



ಯುವ ಮಾರ್ಗ ಸುದ್ದಿ

**ರಾಯಚೂರು,ನ.12–** ಕರ್ನಾಟಕ ರಾಜ್ಯ ಸಾರಿಗೆ ವ್ಯವಸ್ಥೆ ದೇಶದಲ್ಲೇ ಮಾದರಿಯಾಗಿದೆ. ಅದರಲ್ಲೂ ನಮ್ಮ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಜನಸ್ನೇಹಿ ಸಾರಿಗೆ ವ್ಯವಸ್ಥೆ ಹೊಂದಿದ್ದಕ್ಕಾಗಿ ಹತ್ತು ಹಲವು ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳು ಪಡೆದಿದೆ ಎಂದು ಕೆಕೆಆರ್‌ಟಿಸಿ ನೂತನ ಅಧ್ಯಕ್ಷ ಅರುಣಕುಮಾರ ಎಂ.ವೈ.ಪಾಟೀಲ್ ಅವರು ಹೇಳಿದರು.

ನವೆಂಬರ್ 11ರ ಮಂಗಳವಾರ ನಗರದ ಕೇಂದ್ರ ಬಸ್ ನಿಲ್ದಾಣ ಸೇರಿದಂತೆಯೇ ಸಾರಿಗೆ ಇಲಾಖೆಯ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿ ಅವರು ಮಾತನಾಡಿದರು.

ಇನ್ನೂ ಉತ್ತಮ ಜನಸ್ನೇಹಿ ಸಾರಿಗೆ ವ್ಯವಸ್ಥೆ ಹೊಂದುವುದಕ್ಕಾಗಿ ಬೇಕಾದ ಸುಧಾರಣೆಗಳನ್ನು ತರಲು ನಮ್ಮ ಸರ್ಕಾರ ಸಿದ್ಧವಿದೆ. ನಮ್ಮ ಜನಪರ ಆಲೋಚನೆಗಳನ್ನು ಜಾರಿ ತರುವ ನಿಟ್ಟಿನಲ್ಲಿ ಮೊದಲ ಹಂತದ ಭೇಟಿ ಇದಾಗಿದ್ದು, ಹಂತಹಂತವಾಗಿ ಅಭಿವೃದ್ಧಿ ಕೆಲಸಗಳನ್ನು ಮಾಡುವುದಾಗಿ ಅವರು ಹೇಳಿದರು.

ರಾಯಚೂರು ಕೇಂದ್ರ ಬಸ್ ನಿಲ್ದಾಣ, ಸಿಟಿ ಬಸ್ ನಿಲ್ದಾಣ ಕಾಮಗಾರಿ, ಗ್ರಾಮೀಣ ಬಸ್ ಘಟಕ–1, ರಾಯಚೂರು ಬಸ್ ಘಟಕ–2 ಹಾಗೂ ರಾಯಚೂರು ವಿಭಾಗೀಯ ಕಚೇರಿ ಸ್ಥಳಗಳಿಗೆ ಭೇಟಿ ಮಾಡಿ ಅಲ್ಲಿನ ಸಿಬ್ಬಂದಿಗಳ ಕಾರ್ಯ ವೈಖರಿಗಳನ್ನು ವೀಕ್ಷಿಸಿ ಅವರ ಉತ್ತಮ ರೀತಿಯ ಸ್ವಚ್ಛತೆ ಪರಿಶೀಲಿಸಿ ಹಾಗೂ ಸಿಬ್ಬಂದಿಗಳ ಸಮಸ್ಯೆಗಳನ್ನೂ ಆಲಿಸಿ ಅವರ ಐಕ್ಯತೆಯ ಕಾರ್ಯ ಮೆಚ್ಚುವಂಥದ್ದು ಎಂದು ಅಧ್ಯಕ್ಷರು ಪ್ರಶಂಸಿದರು. ಈ ವೇಳೆ ವಿದ್ಯಾರ್ಥಿಗಳ ಮತ್ತು ಹಿರಿಯ ನಾಗರಿಕರಿಂದ ಬಸ್ಸಿನ ಸಮಸ್ಯೆಗಳನ್ನು ಆಲಿಸಿದರು. (2ನೇ ಪುಟಕ್ಕೆ)

## ರಾಯಚೂರಲ್ಲಿ ವಿಶ್ವ ನ್ಯೂಮೋನಿಯಾ ದಿನಾಚರಣೆ

## ಮಕ್ಕಳಿಗೆ ಉಸಿರಾಟದ ತೊಂದರೆ ಕಾಣಿಸಿದಲ್ಲಿ ನಿರ್ಲಕ್ಷಿಸಬೇಡಿ: ಡಾ.ಸುರೇಂದ್ರಬಾಬು ಪಾಲಕರಿಗೆ ಸಲಹೆ



ಯುವ ಮಾರ್ಗ ಸುದ್ದಿ

**ರಾಯಚೂರು,ನ.12–** ವಾತಾವರಣದ ಏರುಪೇರಿನಿಂದ ನ್ಯುಮೋನಿಯಾ ಇಡಿ ವಿಶ್ವವನ್ನೇ ಕಾಡುತ್ತಿರುವ ಸಾಂಕ್ರಾಮಿಕವಾಗಿದ್ದು, ಅದರಲ್ಲೂ 5 ವರ್ಷದೊಳಗಿನ ಮಕ್ಕಳಿಗೆ ಎಚ್ಚರಿಕೆ ವಹಿಸದಿದ್ದರೆ ಗಂಭೀರ ಸ್ವರೂಪ ಪಡೆಯುವ ಸಾಧ್ಯತೆಗಳಿವೆ. ಈ ದಿಶೆಯಲ್ಲಿ, ನಿರ್ಲಕ್ಷ ವಹಿಸದೇ ವೈದ್ಯರ ಬಳಿ ಪರೀಕ್ಷೆ ಮಾಡಿಸಿ ಅಗತ್ಯವಿದ್ದಲ್ಲಿ ಸೂಕ್ತ ಚಿಕಿತ್ಸೆ ಒದಗಿಸುವ ಮೂಲಕ ಮಕ್ಕಳ ಸುಂದರ ಭವಿಷ್ಯಕ್ಕೆ ಕೈಜೋಡಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರಬಾಬು ಅವರು ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರ್‌ಸಿಹೆಚ್ ವಿಭಾಗ, ಅವರ ಆಶ್ರಯದಲ್ಲಿ ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ನವೆಂಬರ್ 12ರಂದು ಹಮ್ಮಿಕೊಂಡಿದ್ದ ವಿಶ್ವ ನ್ಯೂಮೋನಿಯಾ ದಿನದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನ್ಯುಮೋನಿಯಾ ಜಾಗೃತಿ ದಿನವನ್ನು ಮೊದಲ ಬಾರಿಗೆ 2009ರಲ್ಲಿ ಆಚರಿಸಲಾಯಿತು. ತೀವ್ರ ಉಸಿರಾಟದ ಸಮಸ್ಯೆಯ ಕಾರಣಗಳಿಂದ ಮಕ್ಕಳ ರಕ್ಷಣೆಗಾಗಿ ಜಾಗೃತಿ ನೀಡಲಾಗುತ್ತಿದ್ದು, ವಾಯುಮಾಲಿನ್ಯ ಹಾಗೂ ಧೂಮಪಾನ, ಕೊಳಚೆ ಪ್ರದೇಶಗಳು, ಅಡುಗೆಗೆ ಮಾಲಿನ್ಯಕಾರಕ ಇಂಧನ ಬಳಕೆ, ಅತಿಯಾದ ವಾಹನಗಳ ಹೊಗೆ ಇವು ನ್ಯುಮೋನಿಯಾ ಉಂಟಾಗಲು ಹೆಚ್ಚಿನ ಕಾರಣವಾಗುವವು.

ಮುಖ್ಯವಾಗಿ ಇದು ಶ್ವಾಸಕೋಶದ ಮೇಲೆ ಪರಿಣಾಮ ಬೀರುವ ಉಸಿರಾಟದ ಸಮಸ್ಯೆ, ಗಾಳಿಯ ಚೀಲಗಳ ಅಂಗಾಂಶ ಉರಿಯೂತದಿಂದ ಕೂಡಿದ್ದು, ದ್ರವ ಅಥವಾ ಕೀವುಗಳಿಂದ ತುಂಬಿರುತ್ತದೆ. ಇದಲ್ಲದೆ ಬ್ಯಾಕ್ಟೀರಿಯಾ, ವೈರಾಣು ಅಥವಾ ಶಿಲೀಂಧ್ರಗಳು ಸಹ ಇದಕ್ಕೆ ಕಾರಣವಾಗಬಹುದು. ಆದರೆ, ಇದು ತಡೆಗಟ್ಟಬಹುದಾದ ರೋಗವಾಗಿದ್ದು, ಲಸಿಕೆ, ಆರೋಗ್ಯ ಶಿಕ್ಷಣ ಮತ್ತು ಸಮುದಾಯ (2ನೇ ಪುಟಕ್ಕೆ)

## ಪಾಲಿಕೆ ಆಯುಕ್ತರಿಂದ ತಗ್ಗುಗುಂಡಿ, ಚರಂಡಿ ದುರಸ್ತಿ ಕಾಮಗಾರಿಗಳ ಖುದ್ದು ಪರಿಶೀಲನೆ



ಯುವ ಮಾರ್ಗ ಸುದ್ದಿ

**ರಾಯಚೂರು,ನ.12–**ರಾಯಚೂರು ಮಹಾನಗರ ಪಾಲಿಕೆ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು'ಂಜೆ ರಾಯಚೂರು ನಗರದಲ್ಲಿ ಬಿರುಸಿನ ಸಿಟಿ ಸಂಚಾರ ಕೈಗೊಂಡು, ರಸ್ತೆಯಲ್ಲಿನ ತಗ್ಗು ಗುಂಡಿಗಳನ್ನು ಮುಚ್ಚುವ ಕಾರ್ಯ ಮತ್ತು ಚರಂಡಿ ಸರಿಪಡಿಸುವ ಕಾಮಗಾರಿಗಳನ್ನು ಖುದ್ದು ಪರಿಶೀಲಿಸಿದರು.

ಪಾಲಿಕೆ ಎಂಜಿನಿಯರಿಂಗ್ ತಂಡ ಮತ್ತು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳೊಂದಿಗೆ ನಗರ ಸುತ್ತಾಡಿದ ಆಯುಕ್ತರು, ಬಾಕಿ ಇರುವ ಎಲ್ಲಾ ರಸ್ತೆಗಳ ಮತ್ತು ಸಿವಿಲ್ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಮುಂದಿನ 3 ತಿಂಗಳ ಕಾಲವಕಾಶದ ಗಡುವು ವಿದಿಸಿದರು. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ವರ್ಷ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಸುರಿದ ಭಾರಿ ಮಳೆಯಿಂದಾಗಿ ರಾಯಚೂರು ಸಿಟಿಯಲ್ಲಿ, ನಿರೀಕ್ಷಿತ ಮಟ್ಟದಲ್ಲಿ ರಸ್ತೆ ಮತ್ತು ಸಿವಿಲ್ ಕಾಮಗಾರಿಗಳನ್ನು ಮಾಡಲು ಸಾಧ್ಯವಾಗಲಿಲ್ಲ. ಹಲವು ವರ್ಷಗಳ ನಂತರ ಮೊದಲ ಬಾರಿಗೆ ಪಾಲಿಕೆಯಿಂದ ರಸ್ತೆ ನಿರ್ವಹಣಾ ಟೆಂಡರ್ ಕರೆಯಲಾಗಿದೆ. ಪಾಲಿಕೆಯಿಂದ 1 ಕೋಟಿ ರೂ.ಗಳ ಟೆಂಡರ್ ಮೊತ್ತದೊಂದಿಗೆ, ರಸ್ತೆಗಳಲ್ಲಿನ ತಗ್ಗು ಗುಂಡಿ ಮುಚ್ಚುವ ಕೆಲಸ ಪ್ರಾರಂಭಿಸಲಾಗಿದೆ. ಈ ಕಾರ್ಯವು ಹಗಲು, ರಾತ್ರಿ ನಡೆಯಬೇಕು. ಕಾಮಗಾರಿಯ ಗುಣಮಟ್ಟದ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು ಎಂದು ಅವರು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಪಾಲಿಕೆಯಿಂದ 8 ಕಾರ್ಯ ನಿರೀಕ್ಷಕರ (2ನೇಪುಟಕ್ಕೆ...)

## ಶ್ರೀನಾರಾಯಣತೀರ್ಥರ 52 ನೇ ಉತ್ತಾರರಾಧನೆ



ಯುವ ಮಾರ್ಗ ಸುದ್ದಿ

**ಮಾನ್ವಿ,ನ.12–**ಪಟ್ಟಣದ ಶ್ರೀ ನಾರಾಯಣ ತೀರ್ಥರ ಆಶ್ರಮದಲ್ಲಿ ಶ್ರೀ ನಾರಾಯಣ ತೀರ್ಥರ 52 ನೇ ಆರಾಧನೆಯ ಉತ್ತಾರರಾಧನೆ ಅಂಗವಾಗಿ ಶ್ರೀ ನಾರಾಯಣ ತೀರ್ಥರ ವೃಂದವನದಲ್ಲಿ ಬೆಳಿಗ್ಗೆ ನಿರ್ಮಾಲ್ಯ ವಿಸರ್ಜನೆ,ರಾಯರ ಅಷ್ಟೋತ್ತರ ಪಾರಾಯಣ,ಫಲ ಪಂಚಾಮೃತಾಭಿಷೇಕ,ಅಲಂಕಾರ ಸಮಗ್ರ ಶ್ರೀ ಹರಿಕಥಾಮೃತಸಾರ ಗ್ರಂಥದ ಪಾರಾಯಣ, ಸ್ವಯಂವ್ಯಕ್ತ ವಾಯುದೇವರಿಗೆ ಮಧು ಅಭಿಷೇಕದಿಂದ ವಾಯುಸ್ತುತಿ ಪುನಶ್ಚರಣ ನಡೆಯಿತು. ಶ್ರೀ ನಾರಾಯಣ ತೀರ್ಥರ ವೃಂದವನಕ್ಕೆ ಉತ್ತಾತರರಾಧನೆ ಅಂಗವಾಗಿ ವಿಶೇಷ ಹೂವಿನ ಅಲಂಕಾರ ಮಾಡಲಾಯಿತು.

ಬೆಂಗಳೂರಿನ ಪಂ.ಗುರುರಾಜದಾಸರು ಹಾಗೂ ಹೈದ್ರಾಬಾದಿನ ಪಂ.ಪ್ರಾಣೇಶಚಾರ್ ರಿಂದ ಶ್ರೀ ನಾರಾಯಣ ತೀರ್ಥರ ಕುರಿತು ಪ್ರವಚನ ನಡೆಯಿತು. ವಿವಿಧ ಭಜನ ಮಂಡಳಿಗಳವರಿಂದ ಭಜನೆಯ ಮೂಲಕ ಪಲ್ಲಕ್ಕಿ ಉತ್ಸವ ಹಾಗೂ ಮಹಾ ರಥೋತ್ಸವ ನಡೆಯಿತು.ಸಂಜೆ ಪಲ್ಲಕ್ಕಿಸೇವೆ,ಸ್ವಸ್ತಿವಾಚನ ನಡೆಯಿತು.

ಆಶ್ರಮದ ವ್ಯವಸ್ಥಾಪಕರಾದ ಕೃಷ್ಣಮೂರ್ತಿ,ಡಾ.ವಿಜಯರಾವ ಕುಪನೇಶಿ,ಬ್ರಾಹ್ಮಣ ಸಮಾಜದ ಅಧ್ಯಕ್ಷ ಮುದ್ದುರಂಗರಾವ ಮುತಾಲಿಕ,ಮುಖಂಡರಾದ ಭೀಮಸೇನರಾವ.ಟಿ.ವೆಂಕೋಬರಾವ ಹರನಳ್ಳಿ,ಶ್ರೀಧರ ಮಾಸ್ಟರ್,ನರಸಿಂಹಾಚಾರ್ಯ ಜಾನೇಕಲ್ ,ಸೇರಿದಂತೆ ಪಟ್ಟಣದ ಬ್ರಾಹ್ಮಣಸಮಾಜದವರು ಹಾಗೂ ರೈವೈಶ್ಯ ಸಮಾಜದವರು ಸೇರಿದಂತೆ ಸಾವಿರಾರು ಭಕ್ತರು ರಥೋತ್ಸವ ಹಾಗೂ ಆರಾಧನೆಯಲ್ಲಿ ಭಾಗವಹಿಸಿದರು.

## ಮೊದಲನೇಯ ಪುಟದಿಂದ

# 2,900 ಕಿಲೋಗ್ರಾಂ ಸ್ಫೋಟಕದಿಂದ ದೇಶದ ಹಲವೆಡೆ ವಿಧ್ವಂಸಕ ಕೃತ್ಯಕ್ಕೆ ಸ್ಕೆಚ್ ಹಾಕಿದ್ದ ಉಗ್ರರು

ಘಟನೆಯಲ್ಲ. ಇದು ಪೂರ್ವನಿಯೋಜಿತ ಭಯೋತ್ಪಾದಕ ಕೃತ್ಯ. ವೈದ್ಯರ ನಿವಾಸದಿಂದ 2,900 ಕಿಲೋ ಗ್ರಾಮ್ ನಷ್ಟು ಸ್ಫೋಟಕ , ಶಸ್ತ್ರಾಸ್ತ್ರಗಳು ಪತ್ತೆಯಾಗಿತ್ತು.

ಬಿಜೆಪಿಯ ರಚನಾತಕ ಬುದ್ಧಿಮತ್ತೆ ಉಗ್ರರ ವಿಧ್ವಂಸಕ ಷಡ್ಯಂತ್ರವನ್ನು ವಿಫಲಗೊಳಿಸಿದೆ. ಪ್ರಧಾನಿ ನರೇಂದ್ರಮೋದಿಯವರ ನೇತೃತ್ವದಲ್ಲಿ ಭಯೋತ್ಪಾದಕ ಕೃತ್ಯಗಳು ನಡೆಯುವುದಕ್ಕೆ ಮೊದಲೇ ನಿರ್ಮೂಲನೆಯಾಗುತ್ತದೆ.

ಮೋದಿಯವರ ನೇತೃತ್ವದಲ್ಲಿ ಭದ್ರತಾ ಏಜೆನ್ಸಿಗಳು ನಿರ್ಭೀತಿಯಿಂದ, ಸರ್ವ ಸ್ವಾತಂತ್ರ್ಯದಿಂದ ಕಾರ್ಯ ನಿರ್ವಹಿಸುತ್ತಿವೆ. ಅಲ್ಲಿ ಯಾವುದೇ ರಾಜಕೀಯ ಮಧ್ಯಪ್ರವೇಶ ಇರುವುದಿಲ್ಲ. ಭಾರತದ ವಿರುದ್ಧದ ಯಾವುದೇ ಬೆದರಿಕೆಯನ್ನು ಮಟ್ಟ ಹಾಕಲಾಗುತ್ತಿದೆ.

# ಪಾಲಿಕೆ ಆಯುಕ್ತರಿಂದ ತಗ್ಗುಗುಂಡಿ, ಚರಂಡಿ ದುರಸ್ತಿ ಕಾಮಗಾರಿಗಳ ಖುದ್ದು ಪರಿಶೀಲನೆ

ತಂಡವನ್ನು ರಚಿಸಲಾಗಿದ್ದು, ತಂಡದವರು ಪ್ರತಿದಿನ 5-6 ಕಾಮಗಾರಿ ಸ್ಥಳಗಳಿಗೆ ಭೇಟಿ ನೀಡಬೇಕು. ನಿಧಾನಗತಿಯ ಕೆಲಸ ಮತ್ತು ಗುಣಮಟ್ಟದ ಬಗ್ಗೆ ಯಾವುದೇ ದೂರುಗಳು ಬಂದಲ್ಲಿ ಕೂಡಲೇ ಸ್ಪಂದಿಸಿ ಯುದ್ಧೋಪಾದಿಯಲ್ಲಿ ಪರಿಹರಿಸಬೇಕು ಎಂದು ಅವರು ತಿಳಿಸಿದರು.

ಎಲ್ಲಾ ಏಜೆನ್ಸಿಗಳ ಕೆಲಸ ಮತ್ತು ಎಂಜಿನಿಯರಿಂಗ್ ತಂಡಗಳು ಮಹಾನಗರ ಪಾಲಿಕೆಯಿಂದ ಅನುಮತಿ ಮತ್ತು ಸ್ಥಳ ಗುರುತು ಪಡೆಯಬೇಕು. ಗುಣಮಟ್ಟದ ಪರಿಶೀಲನೆಯ ನಂತರ ಮಾತ್ರ ಕಾಮಗಾರಿಗಳನ್ನು ವಹಿಸಿಕೊಡಲಾಗುತ್ತದೆ. ಕಾಮಗಾರಿ ಕಳಪೆ ಮತ್ತು ಅವೈಜ್ಞಾನಿಕವಾಗಿದೆ ಎಂದು ಕಂಡುಬಂದಲ್ಲಿ ಪಾಲಿಕೆಯು ಎನ್‌ಒಸಿಯನ್ನು ತಿರಸ್ಕರಿಸುತ್ತದೆ. ಮತ್ತು ಹಸ್ತಾಂತರವನ್ನು ತೆಗೆದುಕೊಳ್ಳುವುದಿಲ್ಲ. ಮತ್ತು ಜಿಲ್ಲಾಧಿಕಾರಿಗಳಿಗೆ ಮತ್ತು ಸಂಬಂಧಪಟ್ಟ ಇಲಾಖಾ ಕಾರ್ಯದರ್ಶಿಗಳಿಗೆ ವರದಿ ಮಾಡುತ್ತದೆ ಎಂದು ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳಿಂದ ಪರಿಶೀಲನೆ ನಡೆದಿದೆ: ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಎರಡು ವಾರಗಳ ಹಿಂದೆ ರಾಯಚೂರಿನ ಮಹಾನಗರ ಪಾಲಿಕೆ ಆಯುಕ್ತರೊಂದಿಗೆ ಲೋಕೋಪಯೋಗಿ ಇಲಾಖೆಯ ವಿವಿಧ ಕಾಮಗಾರಿಗಳ ಕುರಿತು ಪರಿಶೀಲನಾ ಸಭೆ ನಡೆಸಿದ್ದರು. ನಗರ ಮತ್ತು ಜಿಲ್ಲೆಯೊಳಗಿನ ಲೋಕೋಪಯೋಗಿ ಇಲಾಖೆಯ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳನ್ನು ತ್ವರಿತಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ್ದರು. ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡ ಎಲ್ಲಾ ಮುಖ್ಯ ರಸ್ತೆ ನಿರ್ವಹಣೆ ಮತ್ತು ಹೊಸ ರಸ್ತೆ ನಿರ್ಮಾಣ ಕಾರ್ಯವನ್ನು ಯುದ್ಧೋಪಾದಿಯಲ್ಲಿ ಮಾಡಬೇಕೆಂದು ತಿಳಿಸಿದ್ದರು. ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಲೋಕೊಪಯೋಗಿ ಇಲಾಖೆಯ ಅಧಿಕಾರಿಗಳೊಂದಿಗೆ ನಗರ ಸಂಚಾರ ನಡೆಸಿ ರಸ್ತೆ ಕಾಮಗಾರಿಗಳ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ ಎಂದು ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ತಿಳಿಸಿದರು.

ಭೇಟಿ ವೇಳೆ, ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಎಂಜಿನಿಯರ್ ವೆಂಕಟೇಶ್ ಗಲಗ, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಮಹೇಶ್, ವಿಭಾಗ ಅಧಿಕಾರಿಗಳು ಮತ್ತು ನಿಗಮದ ವಲಯ ಆಯುಕ್ತ ಹೆಬ್ಬಾಳ, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ರಶ್ಮಿ, ಸಹಾಯಕ ಎಂಜಿನಿಯರ್ ಮಲ್ಲಿಕ್ ಸೈಯದ್, ಕುಂದುಕೊರತೆ ನೋಡಲ್ ಅಧಿಕಾರಿ ಬಾಬಾ ಖಾನ್, ಸಲಹೆಗಾರರಾದ ತಾರಾನಾಥ್ ಮತ್ತು ನಾವೇದ್ ಸೇರಿದಂತೆ ಇತರರು ಇದ್ದರು.

## ರಾಜ್ಯ ಸಾರಿಗೆ ವ್ಯವಸ್ಥೆ ದೇಶಕ್ಕೆ ಮಾದರಿ: ಅರುಣಕುಮಾರ ಪಾಟೀಲ್

ಸುಗಮ ಸಾರಿಗೆ ಸೇವೆಯ ನಡುವೆ ಕೆಲ ಸಮಸ್ಯೆಗಳು ಕಾಣಿಸಿಕೊಂಡಿದ್ದು, ಸಮಸ್ಯೆಗಳನ್ನು ಸರಿಪಡಿಸಿಕೊಳ್ಳಲು ಸಂಬಂಧಪಟ್ಟ ಹಾಗೂ ಘಟಕ ವ್ಯವಸ್ಥಾಪಕರು ಸರಿಪಡಿಸಬೇಕು ಎಂದು ಅವರು ಸೂಚನೆ ನೀಡಿದರು.

ನಮ್ಮ ಕಡೆಯಿಂದ ಬೇಕಾದ ಸಹಾಯ, ಸೌಲಭ್ಯ, ಸಹಕಾರ ಪಡೆಯಲು ಮುಕ್ತವಾಗಿ ತಿಳಿಸಿದರೆ ಖಂಡಿತವಾಗಿ ಸಹಾಯ ಮಾಡುವುದಲ್ಲದೆ ಸುಗಮ ಸಾರಿಗೆ ಜನರ ಊರಿಗೆ ಎನ್ನುವ ಧೇಯವಾಕ್ಯವನ್ನು ಸಫಲಗೊಳಿಸುತ್ತೇವೆ ಎಂದು ಅವರು ತಿಳಿಸಿದರು.

ಇದೇ ಸಂದರ್ಭದಲ್ಲಿ ಸಂಸ್ಥೆಯ ಉಪ ಮುಖ್ಯಯಾಂತ್ರಿಕ ಅಭಿಯಂತರಾದ ರಾಜಗೋಪಾಲ ಪುರಾಣಿಕ, ರಾಯಚೂರು ವಿಭಾಗೀಯ ನಿಯಂತ್ರಣ ಅಧಿಕಾರಿಗಳಾದ ಚಂದ್ರಶೇಖರ ಎಂ.ಎಸ್, ವಿದ್ಯಾಸಾಗರ, ಮುದ್ದುಕೃಷ್ಣ, ವಿಜಯಕುಮಾರ ಮತ್ತು ಘಟಕ ವ್ಯವಸ್ಥಾಪಕರು ಮತ್ತು ಸಂಸ್ಥೆಯ ಅಧಿಕಾರಿಗಳು ಸಿಬ್ಬಂದಿ ವರ್ಗದವರು ಇದ್ದರು.

# ಮಕ್ಕಳಿಗೆ ಉಸಿರಾಟದ ತೊಂದರೆ ಕಾಣಿಸಿದಲ್ಲಿ ನಿರ್ಲಕ್ಷಿಸಬೇಡಿ: ಡಾ.ಸುರೇಂದ್ರಬಾಬು ಪಾಲಕರಿಗೆ ಸಲಹೆ


ಆರೋಗ್ಯ ಶಿಬಿರಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ ಎಂದರು. ಕೆಮ್ಮಿದಾಗ ಹಸಿರು, ಹಳದಿ ಅಥವಾ ರಕ್ತಸಿಕ್ತ ಲೋಳೆ ಕಾಣಿಸಿಕೊಳ್ಳುವುದು, ತೀವ್ರ ಜ್ವರ ಮತ್ತು ಶೀತ., ಓಡಾಟ, ಮೆಟ್ಟಿಲು ಹತ್ತುವಾಗ, ಕೆಲಸ ಮಾಡುವಾಗ ಉಸಿರಾಟದ ತೊಂದರೆ., ಕೆಮ್ಮುವಾಗ, ಆಳವಾದ ಉಸಿರಾಟದ ವೇಳೆ ಎದೆ ನೋವು ಕಾಣಿಸುವುದು., ನೀಶಕ್ತಿ ಅಥವಾ ದಣಿದ ಭಾವನೆ ಇವು ನ್ಯೂಮೋನಿಯಾ ಲಕ್ಷಣಗಳಾಗಿವೆ. ನ್ಯುಮೋನಿಯಾ ರೋಗಿಗಳಲ್ಲಿ ಮಾನಸಿಕ ಅರಿವಿನಲ್ಲಿ ಬದಲಾವಣೆ ಉಂಟಾಗಿ ಗೊಂದಲಕ್ಕೆ ಒಳಗಾಗಬಹುದು ಅಥವಾ ಏಕಾಗ್ರತೆ ಸಮಸ್ಯೆ ಕಾಣಿಸಬಹುದು ಎಂದು ಅವರು ತಿಳಿಸಿದರು.

ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ನಂದಿತಾ ಎಮ್ ಎನ್ ಮಾತನಾಡಿ, 'ಪ್ರತಿ ಉಸಿರನ್ನು ರಕ್ಷಿಸಿ ಮತ್ತು ಪ್ರತಿ ಜೀವವನ್ನು ಉಳಿಸಿ' ಎಂಬ ಘೋಷವಾಕ್ಯದೊಂದಿಗೆ ಈ ವರ್ಷದ ನ್ಯುಮೋನಿಯಾ ದಿನ ಆಚರಿಸಲಾಗುತ್ತಿದ್ದು, ನ್ಯೂಮೋನಿಯಾವು ಸರಿಯಾದ ಲಸಿಕೆ, ನೈರ್ಮಲ್ಯ, ಕಾಪಾಡುವಿಕೆ ಅಗತ್ಯವಾಗಿದೆ. ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ಹಾಗೂ ಪ್ರತಿ ಗುರುವಾರ ನ್ಯುಮೋನಿಯಾಗೆ ಕಾರಣವಾಗುವ ನ್ಯುಮೋಕಾಕಸ್, ಹಬ್ ಮತ್ತು ಇನ್ಫ್ಲುಯೇಂಜಾದಂತಹ ಬ್ಯಾಕ್ಟಿರಿಯಾ ವಿರುದ್ಧದ ಲಸಿಕೆಗಳನ್ನು ವಯಸ್ಸಿಗನುಸಾರ ತಪ್ಪದೆ ಹಾಕಿಸಲು ತಿಳಿಸಿದರು. ಪ್ರಸ್ತುತ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಹೆರಿಗೆ ಮಾತ್ರವಲ್ಲದೆ, ಮಕ್ಕಳ ತಜ್ಞರು ಮಕ್ಕಳಿಗೆ ಅಗತ್ಯ ಚಿಕಿತ್ಸೆ ನೀಡುತ್ತಿದ್ದು ಇದರ ಸದುಪಯೋಗಕ್ಕೆ ವಿನಂತಿಸಿದರು.

ಭಿತ್ತಿಪತ್ರ ಬಿಡುಗಡೆ: ಇದೆ ಸಂದರ್ಭದಲ್ಲಿ ನ್ಯೂಮೋನಿಯಾ ಜಾಗೃತಿ ಪತ್ರಗಳನ್ನು ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ತಾಯಿ ಮಕ್ಕಳ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಪ್ರಜ್ವಲಕುಮಾರ, ಸ್ತ್ರೀರೋಗ ತಜ್ಞೆ ಡಾ.ಶಾಲಿನಿ, ರೆಡಿಯಾಲಾಜಿಸ್ಟ್ ಡಾ.ಭುವನೇಶ್ವರಿ, ಮಕ್ಕಳ ತಜ್ಞರಾದ ಇಮ್ರಾನ್ ಪರ್ವೇಜ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಹಿರಿಯ ಶುಶ್ರೂಷಣಾಧಿಕಾರಿ, ಸಲೋಮಿ, ಜಿಲ್ಲಾ ಫ್ಲೋರೋಸಿಸ್ ಸಲಹೆಗಾರ ಗುರುಪ್ರಸಾದ್, ಬಿಹೆಎಚ್‌ಇಓ ಸರೋಜಾ ಕೆ, ಎಮ್.ಟಿ.ಎಸ್ ಸಂಧ್ಯಾ, ಆರ್‌ಕೆಎಸ್‌ಕೆ ಸಲಹೆಗಾರರು ಸಿದ್ದಮ್ಮ, ಅರುಣ್ ಕುಲಕರ್ಣಿ ಸೇರಿದಂತೆ ಸಿಬ್ಬಂದಿ ಮತ್ತು ತಾಯಂದಿರು ಉಪಸ್ಥಿತರಿದ್ದರು.

# ಬೇಸಿಗೆ ಬೆಳೆಗೂ ನೀರು ಕೊಡೆಂದು ರೈತರ ಪಾದಯಾತ್ರೆ




**ಬಳ್ಳಾರಿ, ನ.12–** ತುಂಗಭದ್ರಾ ಅಚ್ಚುಕಟ್ಟು ಪ್ರದೇಶಕ್ಕೆ ಬೇಸಿಗೆ ಬೆಳೆಗೂ ನೀರು ನೀಡಬೇಕೆಂದು ಆಗ್ರಹಿಸಿ ರಾಜ್ಯ ರೈತ ಸಂಘದ ಅಧ್ಯಕ್ಷ ಮಾಧವ ರೆಡ್ಡಿ ನೇತೃತ್ವದಲ್ಲಿ ಇಂದು

ಸಿರುಗುಪ್ಪ ತಾಲೂಕಿನ ಕರೂರು ಗ್ರಾಮದಿಂದ ಟಿಬಿ ಡ್ಯಾಂವರೆಗೆ ಪಾದಯಾತ್ರೆ ಆರಂಭಿಸಿದೆ.

ಕರೂರಿನಿಂದ ಆರಂಭಗೊಂಡಿರುವ ಪಾದಯಾತ್ರೆ ಕುರುಗೋಡು,ಎಮ್ಮಿಗನೂರು, ಕಂಪ್ಲಿ, ಕಮಲಾಪುರ ಮೂಲಕ ಸಾಗಿ ನ.17ಕ್ಕೆ ತುಂಗಭದ್ರಾ ಜಲಾಶಯದ ಎದುರು ಸೇರಲಿದೆ. ನಂತರ ಅನಿರ್ದಿಷ್ಟಾವಧಿ ಧರಣಿ ನಡೆಯಲಿದೆ.

ಈಗಿರುವ ಬೆಳೆಗೆ ಬರುವ ಡಿಸೆಂಬರ್‌ವರೆಗೆ ನೀರು ಪೂರೈಸಬೇಕು. ಬಳಿಕ ಎರಡನೇ ಬೆಳೆಗೆ ನೀರು ಒದಗಿಸಬೇಕು. ಜಲಾಶಯದ ಎಲ್ಲ ಗೇಟ್ ಗಳನ್ನು ಮುಂದಿನ ಜೂನ್ ಒಳಗೆ ಅಳವಡಿಸಬೇಕು ಎಂದು ಕರೂರು ಮಾಧವರೆಡ್ಡಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.ನಾಡಿದ್ದು ಐಸಿಸಿ ಸಭೆ: ತುಂಗಭದ್ರ ಜಲಾಶಯದ ನೀರಾವರಿ ಸಲಹಾ ಸಮತಿಯ ಸಭೆ ನ. 14ರಂದು ಬೆಂಗಳೂರಿನಲ್ಲಿ ನಡೆಯಲಿದೆ. ಸಮಿತಿಯ ಅಧ್ಯಕ್ಷ, ಸಚಿವ ಶಿವರಾಜ ತಂಗಡಗಿ, ಜಲಸಂಪನ್ಮೂಲ ಸಚಿವ ಡಿ.ಕೆ ಶಿವಕುಮಾರ್ , ತುಂಗಭದ್ರ ಅಚ್ಚುಕಟ್ಟು ಪ್ರದೇಶದ ಶಾಸಕರು, ಸಂಸದರು ಭಾಗವಹಿಸುವರು.

# ಮಾನ್ವಿ: ಶ್ರೀಸತ್ಯಸಾಯಿ ಗಾರ್ಡನ್ ಕಲ್ಯಾಣ ಮಂಟಪ ಶಾಸಕ ಜಿ.ಹಂಪಯ್ಯ ನಾಯಕರಿಂದ ಲೋಕಾರ್ಪಣೆ



ಯುವ ಮಾರ್ಗ ಸುದ್ದಿ

**ಮಾನ್ವಿ,ನ.12–** ನಗರದ ದೇವಣ್ಣ ತೋಟದ ಹತ್ತಿರ ನೂತನವಾಗಿ ನಿರ್ಮಾಣವಾದ ಶ್ರೀ ಸತ್ಯಸಾಯಿ ಗಾರ್ಡನ್ ಕಲ್ಯಾಣ ಮಂಟಪವನ್ನು ಶಾಸಕ ಜಿ.ಹಂಪಯ್ಯ ನಾಯಕರು ಉದ್ಘಾಟಿಸಿ ಲೋಕಾರ್ಪಣೆ ಮಾಡಿದರು.

ನಂತರ ಶ್ರೀ ಸತ್ಯಸಾಯಿ ಗಾರ್ಡನ್ ಮಾಲೀಕರಾದ ನಿವೃತ್ತ ಶಿಕ್ಷಕ ಮಹಾದೇವಪ್ಪ ಅವರು ಕೈಗೊಂಡ ವಿಶೇಷ ಸತ್ಯ ನಾರಾಯಣಸ್ವಾಮಿ ಪೂಜೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಕುಟುಂಬಸ್ಥರಿಗೆ ಶುಭಕೋರಿ ನಂತರ ಮಾತನಾಡಿದ ಅವರು, ಮಾನ್ವಿ ನಗರದ ಜನಸಂಖ್ಯೆ ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಎಲ್ಲಾ ವರ್ಗದ ಜನರಿಗೆ ಮದುವೆ ಸಮಾರಂಭ ಸೇರಿದಂತೆ ಎಲ್ಲಾ ರೀತಿಯ ಸಭೆ ಸಮಾರಂಭಗಳನ್ನು ನಡೆಸಲು ಸೂಕ್ತವಾಗಿದ್ದು, ಕಡಿಮೆ ವೆಚ್ಚದಲ್ಲಿ ಬಡಜನರು ಸಹ ಇಂತಹ ಕಲ್ಯಾಣಮಂಟಪದಲ್ಲಿ ಮದುವೆ ಇತ್ಯಾದಿ ಶುಭ ಸಮಾರಂಭಗಳನ್ನು ಮಾಡಿಕೊಳ್ಳಲು ಅನುಕೂಲಕರವಾಗಿದೆ ಎಂದರು.

ಈ ಸಂದರ್ಭದಲ್ಲಿ ನಗರ ಯೋಜನಾ ಪ್ರಾಧಿಕಾರದ ನೂತನ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ್, ಮುಖಂಡರಾದ ಡಿ ರಾಮಕೃಷ್ಣ ಸಾಬಿರ ಹುಸೇನ್, ಡಾ.ಬಸವ ಪ್ರಭು ಪಾಟೀಲ್ ಬೆಟ್ಟದೂರು, ಇಬ್ರಾಹಿಂ ಖುರೇಶಿ, ಅಮರೇಗೌಡ, ಹರಿಹರ ಗೌಡ, ಅರುಣಚಂದ, ನಾಗರಾಜ್ ಬಳಿಗಾರ್ ಸತ್ತರ್ ಬಂಗ್ಲೆವಾಲೆ, ರಸುಲ್ ಕುರಿಶಿ, ಮಲ್ಲೇಶಿ ಜಗ್ಲಿ, ಮಹಬೂಬ್ ಕುರೇಶಿ, ಹಂಪಯ್ಯ ನಾಯಕ್, ಕಾಮೇಶ್ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಮುಖಂಡರು ಹಾಗೂ ಶಿಕ್ಷಕಕರು ಸಮಾರಂಭದಲ್ಲಿ ಭಾಗವಹಿಸಿ ಶುಭಕೋರಿದರು.

# ಬಿ.ವಿ.ಆರ್ ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾದ ದಿ. ಬಿ.ವೀರಾರೆಡ್ಡಿ. ಬಿ.ಜಯಮ್ಮ ರವರ 3ನೇ ಪುಣ್ಯಸ್ಮರಣೆ



ಯುವ ಮಾರ್ಗ ಸುದ್ದಿ

**ಮಾನ್ವಿ,ನ.12–** ಪಟ್ಟಣದ ಬಿ.ವಿ.ಆರ್ ಇ-ಟೆಕ್ನೋ ಶಾಲೆಯ ಸಭಾಂಗಣದಲ್ಲಿ ಬಿ.ವಿ.ಆರ್ ಎಜ್ಯುಕೇಶನ್ ಟ್ರಸ್ಟ್ ನ ಸಂಸ್ಥಾಪಕರಾದ ದಿ. ಬಿ.ವೀರಾರೆಡ್ಡಿ. ಬಿ.ಜಯಮ್ಮ ರವರ 3ನೇ ಪುಣ್ಯಸ್ಮರಣೆ ಅಂಗವಾಗಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಬಿ.ವಿ.ರೆಡ್ಡಿ ,ಪದ್ಮವತಿ ದಂಪತಿಗಳು ಪಟ್ಟಣದ ಚನ್ನಬಸವೇಶ್ವರ ಅಂಧಮಕ್ಕಳ ಶಾಲೆಯ ಮಕ್ಕಳಿಗೆ ಹಾಗೂ ನೆರಳು ಅನಾಥಶ್ರಮದಲ್ಲಿನ ನಿರಾಶ್ರಿತರಿಗೆ ವಸ್ತ್ರಗಳನ್ನು ದಾನವಾಗಿ ನೀಡುವ ಮೂಲಕ ವಿಶೇಷವಾಗಿ ಆಚರಣೆ ಮಾಡಿ ಮಾತನಾಡಿ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವುದನ್ನು ಗಮನಿಸಿದ ನಮ್ಮ ತಂದೆಯವರಾದ ದಿ. ಬಿ.ವೀರಾರೆಡ್ಡಿ ಯವರು ಬಿ.ವಿ.ಆರ್. ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ಈ ಭಾಗದ ಮಕ್ಕಳಿಗೆ ಅತ್ಯಂತ ಕಡಿಮೆ ಶುಲ್ಕವನ್ನು ಪಡೆದು ಹೆಚ್ಚಿನ ಗುಣಮಟ್ಟದ ಶಿಕ್ಷಣವನ್ನು ನೀಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದರಿಂದ ನಮ್ಮ ಶಾಲೆಯಲ್ಲಿ ಶಿಕ್ಷಣ ಪಡೆದ ಸಾವಿರಾರು ವಿದ್ಯಾರ್ಥಿಗಳು ಉನ್ನತವಾದ ಜೀವನವನ್ನು ರೂಪಿಸಿಕೊಂಡಿದ್ದಾರೆ ಇಂದು ನಮ್ಮ ಸಂಸ್ಥೆಯಿಂದ ವಿದ್ಯಾರ್ಥಿಗಳಿಗೆ ಅಂತರಾಷ್ಟ್ರಿಯ ಗುಣಮಟ್ಟದ ಸಿ.ಬಿ.ಎಸ್.ಶಿಕ್ಷಣವನ್ನು ನೀಡುವುದಕ್ಕೆ ಶಾಲಾ ಕಟ್ಟಡವನ್ನು ನಿರ್ಮಾಣ ಮಾಡಲಾಗುತ್ತಿದೆ ನಮ್ಮ ಸಂಸ್ಥೆಯಲ್ಲಿನ ವಿದ್ಯಾರ್ಥಿಗಳಿಗೆ ಕೇವಲ ಶಿಕ್ಷಣವನ್ನು ಮಾತ್ರ ನೀಡದೆ ಮಕ್ಕಳಿಗೆ ಸಂಸ್ಕಾರ,ಸಂಸ್ಕೃತಿ,ಪರಂಪರೆಯನ್ನು ಕಲಿಸಲಾಗುತ್ತಿದೆ ಎಂದು ತಿಳಿಸಿದರು.

ಶಾಲೆಯ ಆವರಣದಲ್ಲಿನ ದಿ. ಬಿ.ವೀರಾರೆಡ್ಡಿ. ಬಿ.ಜಯಮ್ಮ ರವರ ಮೂರ್ತಿಗಳಿಗೆ ಬೋಗೋಲಿ ಕುಟುಂಬದವರಾದ ಪ್ರವೀಣ ,ಭಾಸ್ಕರ, ಹಾಗೂ ಸರೋಜಮ್ಮ, ನರಸಮ್ಮರಿಂದ ಪೂಜೆಯನ್ನು ಸಲ್ಲಿಸಲಾಯಿತು.

ಅಂತರ್ ಶಾಲಾ ಕ್ರಿಡಾಕೂಟಗಳಲ್ಲಿ ಭಾಗವಹಿಸಿ ವಿಜೇತರಾದ ಮಕ್ಕಳಿಗೆ ಬಹುಮಾನವನ್ನು ವಿತರಿಸಲಾಯಿತು, ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.

ಕಾರ್ಯಕ್ರಮದಲ್ಲಿ ಎ.ಬಿ.ಉಪ್ಪಳಮಠ ವಕೀಲರು, ಹೋಲೀ ಫೇತ್ ಸ್ಕೂಲ್ ಮಸ್ಕಿ ಅಧ್ಯಕ್ಷರಾದ ಕೆ.ವಿ.ರೆಡ್ಡಿ , ಖಾ.ಶಾ.ಆ. ಒಕ್ಕೂಟದ ತಾ.ಅಧ್ಯಕ್ಷರಾದ ಶರಫುದ್ದೀನ್ ಪೋತ್ನಾಳ, ಸರ್ವೋತ್ತಮ ರೆಡ್ಡಿ ಪೋಲೀಸ್ ಪಾಟೀಲ್ ಮುಕ್ಕಂದ , ಮುಖ್ಯಗುರುಗಳಾದ ಸರ್ ಮತ್ ಖಾನ್ , ಶಾಲೆಯ ಶಿಕ್ಷಕರಾದ ಹಂಪಣ್ಣ, ಜ್ಯೋತಿ ಸೇರಿದಂತೆ ಇನ್ನಿತರರು ಇದ್ದರು.

# 'ಒಂದು ಮಗು ಒಂದು ಗಿಡ' ಪ್ರತಿ ಕುಟುಂಬದ ಧ್ಯೇಯವಾಗಬೇಕು :ಉಪನ್ಯಾಸಕ ರಾಮಣ್ಣ ಹಿರೇಬೇರ್ಗಿ



ಯುವ ಮಾರ್ಗ ಸುದ್ದಿ

**ಸಿಂಧನೂರು.ನ.12–** ನಗರದ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆಯುತ್ತಿರುವ ವಿಶೇಷ ವಾರ್ಷಿಕ ಶಿಬಿರದಲ್ಲಿ, ಯುವ ಜನಾಂಗವು ಪರಿಸರದ ಕಡೆಗೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಉಪನ್ಯಾಸಕ ರಾಮಣ್ಣ ಹಿರೇಬೇರ್ಗಿ ಕರೆ ನೀಡಿದರು. "ಒಂದು ಮಗು ಒಂದು ಗಿಡ" ಎಂಬುದು ಪ್ರತಿ ಕುಟುಂಬದ ಧ್ಯೇಯವಾಗಬೇಕು ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, "ಪ್ರಕೃತಿ ಎಲ್ಲಿಯವರೆಗೆ ಹಸಿರಾಗಿರುತ್ತದೆಯೋ ಅಲ್ಲಿಯವರೆಗೆ ನಮಗೆ ಉತ್ತಮ ಉಸಿರಾಟ ಸಿಗುತ್ತದೆ. ಸಾಲುಮರದ ತಿಮ್ಮಕ್ಕ ಅವರಂತಹ ಪ್ರಕೃತಿ ಆರಾಧಕರನ್ನು ನಾವು ಮಾದರಿಯಾಗಿ ತೆಗೆದುಕೊಳ್ಳಬೇಕು. ಪ್ರತಿ ಹುಟ್ಟುಹಬ್ಬಕ್ಕೆ ಒಂದು ಗಿಡ ನೆಡುವ ಅಭ್ಯಾಸದಿಂದ ಪರಿಸರವನ್ನು ಉಳಿಸಬಹುದು" ಎಂದರು.

ನೀರು, ಗಾಳಿ ಮತ್ತು ಮಣ್ಣನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಇಂದಿನ ಯುವ ಜನಾಂಗದ ಮಹತ್ವದ ಜವಾಬ್ದಾರಿಯಾಗಿದೆ ಎಂದು ಹಿರೇಬೇರ್ಗಿ ಒತ್ತಿ ಹೇಳಿದರು. ಈ ಜವಾಬ್ದಾರಿಯನ್ನು ನಿರ್ವಹಿಸದಿದ್ದರೆ, "ಮಂದಿನ ಜನಾಂಗದ ಬದುಕು ದುಸ್ತರವಾಗುತ್ತದೆ" ಎಂದು ಅವರು ಎಚ್ಚರಿಕೆ ನೀಡಿದರು. ಪ್ರಕೃತಿ ಪೂಜೆಯೇ ನಿಜವಾದ ಪೂಜೆ ಎಂದು ಅವರು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉಪನ್ಯಾಸಕ ಪ್ರಸಾದ್ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಉಪನ್ಯಾಸಕರಾದ ವೀರೇಶ ಕನ್ನಾರಿ, ಶಿವಶಂಕರಪ್ಪ, ಜ್ಯೋತಿ, ಶ್ರೀದೇವಿ, ಶಾರದಾ ಮತ್ತು ಮನೋಜ್ ಅವರು ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಶಮೀಮಾ, ಅಕ್ಷತಾ, ಸುನೀತಾ ವಿಲಿಯಂ ನಡೆಸಿಕೊಟ್ಟರು.

## ಕೆ.ಹೊಸಹಳ್ಳಿ ಗ್ರಾಮದ ಯುವಕ ಶಂಕರ್ ಓಬಳಬಂಡಿ ರಾಜ್ಯ ಮಟ್ಟಕ್ಕೆ ಆಯ್ಕೆ




**ಸಿಂಧನೂರು,ನ.12–**ತಾಲೂಕಿನ ಕೆ.ಹೊಸಹಳ್ಳಿ ಗ್ರಾಮದ ಶಂಕರ್ ಓಬಳಬಂಡಿಯವರು ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ಬೆಂಗಳೂರು ಹಾಗೂ ಸುಫಿಯಾ ಕಾನೂನು ಕಾನೂನು ವಿಶ್ವವಿದ್ಯಾಲಯ ತುಮಕೂರು ಇವರ ಸಹಯೋಗದಲ್ಲಿ ಸೋಮವಾರ ತುಮಕೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಕಾನೂನು ವಿದ್ಯಾರ್ಥಿಗಳಿಗೆ ತುಮಕೂರು ವಲಯ ಮಟ್ಟದ 2025-26 ನೆ ಸಾಲಿನ ಮಾದರಿ ವಿಧಾನ ಸಭಾ ಅದಿವೇಶನ ಸ್ಪರ್ಧೆಯಲ್ಲಿ ಮಂಗಳೂರು ಎಸ್.ಡಿ.ಎಂ.ಕಾನೂನು ಮಹಾವಿದ್ಯಾಲಯದ ದ್ವಿತೀಯ ವರ್ಷದ ಎಲ್ ಎಲ್ ಬಿ ವಿದ್ಯಾರ್ಥಿಯಾಗಿದ್ದ ಶಂಕರ್ ಓಬಳಬಂಡಿ ದ್ವಿತೀಯ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾದರು.

ಮಂಗಳೂರು ಎಸ್.ಡಿ.ಎಂ.ಕಾಲೇಜಿನಿಂದ 4 ವಿದ್ಯಾರ್ಥಿಗಳು ಭಾಗವಹಿಸಿದ್ದು, ಮಾದರಿ ಶಾಸಕರ ಆಯ್ಕೆ ಸಂದರ್ಭದಲ್ಲಿ ಬಹುಮತ ಪಡೆದು ಆಡಳಿತ ಪಕ್ಷದ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿ ವಿರೋಧ ಪಕ್ಷದ ಟೀಕೆ ಟಿಪ್ಪಣಿಗಳಿಗೆ ಅಂಕಿ ಅಂಶಗಳ ಮೂಲಕ ಉತ್ತರಿಸಿದ ಆಡಳಿತ ಪಕ್ಷದ ಮಾದರಿ ಮುಖ್ಯಮಂತ್ರಿ ಶಂಕರ್ ಓಬಳಬಂಡಿ ದ್ವಿತೀಯ ಸ್ಥಾನ ಪಡೆದು, ಮಾದರಿ ವಿಧಾನಸಭೆಯಲ್ಲಿ ಮಂಡಿಸಲಾದ ಕರ್ನಾಟಕ ಅನಧಿಕೃತ ಕಾನೂನು ವೃತ್ತಿ ಪ್ರತಿಬಂಧಕ/ನಿಷೇದ ( ನಕಲಿ ನ್ಯಾಯವಾದಿಗಳ )ವಿದೇಯಕ 2025 ರ ಉಪಯೋಗ ಮತ್ತು ಮಹತ್ವಕಾಂಕ್ಷೆಯನ್ನು ತಿಳಿಸಿದ ಮಾದರಿ ಮುಖ್ಯಮಂತ್ರಿ ರಾಜ್ಯಮಟ್ಟಕ್ಕೆ ಆಯ್ಕೆಯಾದರು.

# ಮಾಧ್ಯಮ ಲೋಕದ ನಕ್ಷತ್ರ ರವಿ ಬೆಳಗೆರೆಗೆ ನುಡಿನಮನ

"ರವಿ ಬೆಳಗೆರೆ" ಈ ಹೆಸರು ಕೇಳಿದರೆ ಪ್ರತಿಯೊಬ್ಬ ನಾಗರಿಕನಲ್ಲಿ ಅವರದೆ ಆದ ಅಭಿಪ್ರಾಯ ಮೂಡಿ ಬರುತ್ತದೆ ಸಾಹಿತಿಗಳಿಗೆ ರವಿ ಬೆಳಗೆರೆ ಉತ್ತಮ ಸಾಹಿತಿ ಲೇಖಕನಂತೆ, ಯುವ ಪಿಳಿಗೆಗೆ ಅತ್ಯುತ್ತಮ ಕವಿತೆ ಕಾದಂಬರಿ ಬರೆಯುವ ಕವಿಯಂತೆ,ಪುಸ್ತಕ ಓದುಗನಿಗೆ ಉತ್ತಮ ಸಂಗಡಿಗನಂತೆ,ಹೀಗೆ ಸಮಾಜದಲ್ಲಿ ತನ್ನದೆ ಆದ ವಿಶಿಷ್ಟ ಪತ್ರಿಕೆ ಬರವಣಿಗೆ ಕಾದಂಬರಿ ನೈಜ ಕತೆಗಳು ಹೊರ ತರುವ ಮೂಲಕ ಗುರತಿಸಿಕೊಂಡಿದ್ದ ಮಾಧ್ಯಮ ಲೋಕದ ಮಿನುಗು ನಕ್ಷತ್ರ ಅಕ್ಷರಗಳ ಮೂಲಕ ಸುಂದರ ಪದಗಳನ್ನು ಸೃಷ್ಟಿಸಿ ಅಕ್ಷರಗಳಿಗೆ ಜೀವ ತುಂಬಿಸುವ ಅಕ್ಷರಗಳ ಬ್ರಹ್ಮ ರವಿ ಬೆಳಗರೆ ಒಬ್ಬ ಉತ್ತಮ ಬರಹಗಾರ ಪತ್ರಕರ್ತ ಹಾಗೂ ಸಂಪಾದಕರಾಗಿದ್ದರು.

ಇವರು 1958 ಮಾರ್ಚ್ 15ರಂದು ಬಳ್ಳಾರಿಯ ಸತ್ಯ ನಾರಯಣ ಪೇಟೆಯಲ್ಲಿ ಜನಿಸಿ ಪ್ರಾಥಮಿಕ ಪ್ರೌಢ ವಿದ್ಯಾಭ್ಯಾಸ ಸಿದ್ದಗಂಗಾ ಮಠದಲ್ಲಿ ವ್ಯಾಸಂಗ ಮಾಡಿ ಉನ್ನತ ಶೀಕ್ಷಣವನ್ನು ಬಳ್ಳಾರಿಯ ವೀರಶೈವ ಕಾಲೇಜನಲ್ಲಿ ವ್ಯಾಸಂಗ ಮಾಡಿ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು.

ಬಾಲ್ಯದಲ್ಲಿ ಅನೇಕ ಕಷ್ಟಗಳ ಮಧ್ಯೆ ಬೆಳೆದ ರವಿ ಬೆಳಗೆರೆ ಮಾಡದ ಕೆಲಸವಿಲ್ಲ ಮನೆ ಮನೆಗೆ ಹಾಲು ಮಾರಾಟ, ಚಿತ್ರ ಮಂದಿರಗಳಲ್ಲಿ ಟೀಕೇಟ್ ಮಾರಾಟ,ಒಂದಲ್ಲಾ ಒಂದು ಕೆಲಸದಲ್ಲಿ ತೋಡಗಿದಂತ ವ್ಯಕ್ತಿ

ಇತಿಹಾಸ ಉಪನ್ಯಾಸಕನಾಗಿ ತಮ್ಮ ವೃತ್ತಿ ಜೀವನ ಆರಂಭ ಮಾಡಿದ ಇವರು ಕೇವಲ 120ರೂಪಾಯಿ ತಿಂಗಳ ವೇತನ ಪಡೆದು ಆರಂಭವಾದ ಇವರ ಜೀವನದಲ್ಲಿ ಇಟ್ಟ ಮೊದಲ ಹೆಜ್ಜೆ ಯಾವತ್ತೂ ಹಿಂದಿಡಲಿಲ್ಲಾ.

ಬಳ್ಳಾರಿಯಿಂದ ಬೆಂಗಳೂರಿಗೆ ಬಂದು ತನ್ನ ಬದುಕನ್ನ ಕಟ್ಟಿಕೊಳ್ಳಲು ಉಪನ್ಯಾಸಕ ವೃತ್ತಿಗೆ ರಾಜೀನಾಮೆ ನೀಡಿ, ಲಂಕೇಶ್ ಪತ್ರಿಕೆಯಲ್ಲಿ ಕೆಲಸ ಮಾಡಲು ಆರಂಭಿಸಿದರು. ಕರ್ಮವೀರ, ಕಸ್ತೂರಿ, ಸಂಯುಕ್ತ ಕರ್ನಾಟಕದಲ್ಲಿ ಕೆಲಸ ಮಾಡಿದ್ದಾರೆ.

1995ರಲ್ಲಿ ತನ್ನ ಸಹಪಾಠಿಗಳ ಸಹಾಯದಿಂದ "ಹಾಯ್ ಬೆಂಗಳೂರು" ಪತ್ರಿಕೆ ಆರಂಭಿಸಿದರು ತನ್ನ ಬರವಣಿಗೆಯಿಂದ ಪತ್ರಿಕೆ ಮೂಲಕ ಭೂಗತ ಲೋಕದ ಹಲವಾರು ಮುಖಗಳನ್ನು ಬಯಲಿಗೆ ತಂದರು "ಹಾಯ್ ಬೆಂಗಳೂರು" ಪತ್ರಿಕೆಯು ಸಮಾಜಕ್ಕೆ ಕಂಟಕವಾಗುವ ಚಟುವಟಿಕೆಗಳನ್ನು ಗುರುತಿಸಿ ಅವುಗಳನ್ನು ಹೊರತಂದು ಕಡಿವಾಣ ಹಾಕಿದರು ಅದಲ್ಲದೇ ರಾಜಕಿಯ ಲೋಕದ ಪುಡಾರಿಗಳಿಗೆ ತನ್ನ ಬರವಣಿಗೆ ಮುಖಾಂತರ ಪಾಠ ಕಲಿಸಿದವರು ನಂತರ "ಓ ಮನಸ್ಸೆ" ಪತ್ರಿಕೆ ಆರಂಭಿಸಿ ಯುವಕರು ಯೌವನದಲ್ಲಿ



ಅನುಭವಿ ಸುವ ಪ್ರೀತಿ,ಪ್ರೇಮ,ಪ್ರಣಯ,ವಿರಹಗಳ ಕುರಿತು ಕವಿತೆಗಳನ್ನು ರಚಿಸಿ ಯುವಕರ ಮನಸ್ಸಿನಲ್ಲಿ ಉತ್ತಮ ಪ್ರೇಮಕವಿಯಾಗಿ ಮನೆ ಮಾಡಿದ.

ರವಿ ಬೆಳಗೆರೆ ಭಿನ್ನ ವಿಭಿನ್ನ ವ್ಯಕ್ತಿ ಅವರ ಬದುಕು ಬರವಣಿಗೆಗಾಗಿ ಮೀಸಲಿಟ್ಟು "ಆಡು ಮುಟ್ಟದ ಸೊಪ್ಪಿಲ್ಲಾ ರವಿ ಬೆಳಗೆರೆ ಕೈಯಾಡಿಸಿದ ರಂಗವಿಲ್ಲಾ"ಎಂಬಂತೆ ಉಪನ್ಯಾಸಕನಾಗಿ, ಪತ್ರಿಕೋದ್ಯಮದ ಬರಹಗಾರನಾಗಿ,ವಿಶೇಷ ಕಾರ್ಯಕ್ರಮಗಳ ನಿರುಪಕನಾಗಿ,ಧಾರವಾಹಿ,ಸಿನಿಮಾ ಕ್ಷೇತ್ರ,ಎಲ್ಲಕ್ಕಿಂತ ಹೆಚ್ಚಾಗಿ ರವಿ ಬೆಳಗೆರೆ ಕರ್ನಾಟಕದ್ಯಾಂತ ಹೆಸರುವಾಸಿಯಾಗಿದ್ದರು

ಈ.ಟಿವಿಯಲ್ಲಿ ಪ್ರಸಾರವಾಗುತ್ತಿರುವ "ಕ್ರೈ ಡೈರಿ" ಇವರಿಗೆ ತುಂಬಾ ಹೆಸರು ತಂದು ಕೊಟ್ಟಿತು ಅದರಲ್ಲೂ ಈ.ಟಿವಿಯಲ್ಲಿ "ಎಂದು ಮರೆಯದ ಹಾಡು" ಬಹಳಷ್ಟು ಜನಪ್ರಿಯತೆ ಕೊಟ್ಟಿತು.

ಸಿನಿಮಾ ಕ್ಷೇತ್ರದಲ್ಲಿ ಕೆಲವು ಕೀರುತರೆ ಧಾರವಾಹಿಗಳು ಚಲನಚಿತ್ರಗಳಲ್ಲಿ ನಾಯಕ ಖಳನಾಯಕ ನಿರ್ದೇಶಕನಾಗಿ ಸಿನಿಮಾ ರಂಗಕ್ಕೆ ತನ್ನದೆ ಆದ ಕೊಡುಗೆ ನೀಡಿದವರು.

ತಮ್ಮ ಬದುಕನ್ನು ಸಮಾಜದ ಒಳತಿಗಾಗಿ ಮೀಸಲಿಟ್ಟ ರವಿ ಬೆಳಗೆರೆ ಅವರ ಹರಿತವಾದ ಬರವಣಿಗೆಯ ಮುಖಾಂತರವೆ ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೆ ವಿಶ್ವ ವಿದ್ಯಾನಿಲಯದಂತಾಗಿದ್ದರು ಏನನ್ನು ಬರೆಯಬೇಕು ಹೇಗೆ ಬರೆಯಬೇಕು ಯಾವುದನ್ನು ಬರೆಯಬಾರದು ಅಂತ ಅವರ ಬರವಣಿಗೆ ಮುಖಾಂತರವೇ ಕಲಿಸುತಿದ್ದರು.

ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಹರಿಯುವ ಭೀಮಾ ತೀರದದಲ್ಲಿ ಕುಖ್ಯಾತರಾಗಿದ್ದ ಮೂವರು ಹಂತಕರು ಕೇಶಪ್ಪ ತಾವರಕೇಡ,ಶಿವಾಜಿ ಬೋರಗಿ,ಮತ್ತು ಚಂದಪ್ಪ ಹರಿಜನ ಈ ಮೂವರು ಭೀಮಾತೀರದಲ್ಲಿ ಮಾಡಿದಂತ ಭೀಕರ ಕೊಲೆ ಹಾಗೂ ನಡೆಸಿದ ರಕ್ತಪಾತ ಕುರಿತು ಪ್ರತಿ ಹಲ್ಲೆ ಕೊಲೆಯ ಹಿಂದೆ ಏನಾದರು ಕಾರಣ ಇದ್ದೆ ಇರುತ್ತಿತ್ತೊ ಆ ಕಾರಣದ ಜಾಡನ್ನು ಹಿಡಿದು ಅದರ ಬೆನ್ನತ್ತಿ ಸಮಗ್ರವಾದ ವಿವರಣೆ ಪಡೆದು ಎಳೆಎಳೆಯಾಗಿ ಬಿಚ್ಚಿಟ್ಟು ಓದುಗರ ರೋಚಕತೆ ಶಿಖರಕ್ಕೆ ಏರುವಂತ ಪುಸ್ತಕವೇ "ಭೀಮಾ ತೀರದ ಹಂತಕರು" ಕೇವಲ ಈ ಮೂವರು ಮಾಡಿದ ಪಾಪಕೃತ್ಯಗಳನ್ನಷ್ಟೆ ವಿವರಿಸದೆ ಇವರ ಕೃತ್ಯಗಳು ಇವರ ಸಾವಿಗೆ ಯಾವ ರೀತಿ ಕಾರಣವಾದವು ಮತ್ತು ಈ ಮೂವರು ಎಂತ ಸಾವನ್ನು ಕಂಡರು ಎಂಬುದರ ಕುರಿತು ಪುಸ್ತಕವಲ್ಲದೆ ಕನ್ನಡದ ಸಾಹಸಮಯ ಚಲನಚಿತ್ರ "ಭೀಮಾ ತೀರದಲ್ಲಿ"ಈ ಚಿತ್ರದ ಸಾರಂಶವಾಗಿದೆ.

ಪುಸ್ತಕಗಳು ಬರೆಯಲು ಕುಳಿತರೆ ಮಹಾದೈತ್ಯ ದುಂಡುಗಿನ ಅಕ್ಷರಗಳು ಪೆನ್ನಿನ ಶಾಯಿಯಿಂದ ಬರೆಯಲು ಆರಂಭಿಸಿದರೆ ಕಡೆಯ ಅಕ್ಷರ ಬರೆದು ಪುಲ್ ಸ್ಕಾಪ್ ಇಡುವವರಗೆ ಅವರ ಪೆನ್ನು ನಿದ್ದೆ ಮಾಡುತ್ತಿರಲಿಲ್ಲಾ.

'ಓದುಗನ ಕಣ್ಣು ಸೋಲಬಹುದು ಬರೆಯುವವನ ಕೈ ಯಾವತ್ತೂ ಸೋಲದು' ಎಂಬಂತೆ ಸದಾ ಏನಾದರು ಬರೆಯುವ ಹವ್ಯಾಸಿಗ ಬರೆಯಲು ನಿಲ್ಲಿಸಿದರೆ ಅವರಿಗೆ ದಣಿವಾಗುತಿತ್ತು ಹಾಗೇಯೆ ಸ್ವಾರಸ್ಯಕರ ಮಾತುಗಾರ,ಹಾಡು,ಗಾಯನ,ಶಾಯಿರಿಗಳ ಅಪ್ಪಟ ದಾಸನಾಗಿದ್ದ.

ದೇವರನ್ನು ನಂಬದ ಬೆಳಗೆರೆ ಕೆಲವು ವರ್ಷಗಳಲ್ಲಿ ತಮ್ಮ ಆರೋಗ್ಯಕ್ಕಾಗಿ ಹಲವಾರು ಹೋಮ ಹವನ ಮಾಡಿದರು ನಂತರ ದಿನಗಳಲ್ಲಿ ಆರೋಗ್ಯ ಹದಗೆಡಲು ಶುರುವಾಯಿತು ಲೇಖನಿಯ ಶಾಯಿಯು ಮುಗಿಯುತ್ತ ಬಂದಿತ್ತು ದ್ವೇಷ,ಗುದ್ದಾಟ ತಾರಕಕ್ಕೆ ಏರಿತ್ತು, ಅದರಲ್ಲೂ ಕೋಳಿವಾಡ ಪ್ರಕರಣ,ಸುಫಾರಿ ಕೇಸು ಹೀಗೆ ಇನ್ನು ಹಲವಾರು ವಯಕ್ತಿಕ ವಿಚಾರಗಳು ಅವರನ್ನ ಮಾನಸಿಕವಾಗಿ ಬಗ್ಗು ಬಡಿದಿತ್ತು.

ಇವುಗಳ ಮಧ್ಯೆ ಪ್ರತಿ ಮಗುವಿನ ವಿಶಿಷ್ಟತೆಯನ್ನು ಬೆಳೆಸುವ ಮತ್ತು ಸ್ವಯಂ ಅರಿವು ಆತ್ಮ ವಿಶ್ವಾಸ ಪ್ರತಿ ಮಗುವಿನಲ್ಲಿ ಬರಲಿ ಎನ್ನುವ ಗುರಿಯಿಂದ "ಪ್ರಾರ್ಥನಾ ಶಾಲೆ" ಎಂಬ ಶೈಕ್ಷಣಿಕ ಸಂಸ್ಥೆ ಸ್ಥಾಪಿಸಿದ್ದರು.

ನವೇಂಬರ 13,2020ರಂದು ಖ್ಯಾತ ಲೇಖಕ ಹಾಗೂ ಪತ್ರಕರ್ತ ರವಿ ಬೆಳಗೆರೆ ಅರವತ್ತೆರಡನೆ ವಯಸ್ಸಿನಲ್ಲಿ ಹೃದಯಘಾತದಿಂದ ಮರಣ ಹೊಂದುತ್ತಾನೆ

ಅದೇನೇ ಇರಲಿ, ರವಿ ಬೆಳಗೆರೆಯೆಂದರೆ ನೆನಪಾಗುವುದು ಹಳೆಯ ನೆನಪುಗಳ ರಸದೌತಣ ಬಡಿಸುತ್ತಿದ್ದ ಖಾಸ್ ಬಾತ್, ಉಪದೇಶಾಮೃತ ಉಣಿಸುತ್ತಿದ್ದ ಬಾಟಂ ಐಟಂ, ತುಂಟತನದಿಂದ ತುಂಬಿದ್ದ ಕೇಳಿ ಅಂಕಣ, ತಾವೇ ಬರೆಯುತ್ತಿದ್ದ ಸಮಾಧಾನ ಅಂಕಣ, ಹಿಮಾಲಯನ್ ಬ್ಲಂಡರ್, ರಕ್ತಸಿಕ್ತ ಅಧ್ಯಾಯದ ಪಾಪಿಗಳ ಲೋಕ, ಭೀಮಾ ತೀರದ ಹಂತಕರು, ಕಂಪನಿ ಆಫ್ ವುಮನ್, ಕಾಮರಾಜ ಮಾರ್ಗ, ಸುರುಳಿಸುರುಳಿಯಾಗಿ ಹೊಗೆ ಕಾರುತ್ತಿದ್ದ ಮಾರ್ಲ್ ಬೋರೋ ಸಿಗರೇಟುಗಳು, ಹೇಳಿ ಹೋಗು ಕಾರಣ. ಈಗ ಕಾರಣ ಹೇಳದೆಯೆ ಹೊರಟುಬಿಟ್ಟಿದ್ದಾರೆ. ರವಿ ಅಸ್ತಂಗತರಾದರೂ, ಅವರ ಬರವಣಿಗೆಗಳು ಸದಾ ಅಜರಾಮರ..

ಎಚ್.ಎಸ್.ನಾಯಕ
ಯುವ ಬರಹಗಾರರು
ಬಿ.ಗಣೇಕಲ್



## ಬೆಳಗಾವಿ ಅಧಿವೇಶನದಲ್ಲಿ ಸರ್ಕಾರದ ಸವಲತ್ತುಗಳನ್ನು ಪಡೆಯುವುದಿಲ್ಲ : ಶಾಸಕ ಶರಣಗೌಡ ಕಂದಕೂರ

**ಬೆಂಗಳೂರು, ನ.12–** ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ವಿಧಾನಸಭೆ ಅಧಿವೇಶನದ ಸಂದರ್ಭದಲ್ಲಿ ಸರ್ಕಾರದ ಸವಲತ್ತುಗಳನ್ನು ಪಡೆಯುವುದಿಲ್ಲ ಎಂದು ಗುರುಮಠಕಲ್ ಕ್ಷೇತ್ರದ ಜೆಡಿಎಸ್ ಶಾಸಕ ಶರಣಗೌಡ ಕಂದಕೂರ್ ಅವರು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರಿಗೆ ಪತ್ರ ಬರೆದಿದ್ದಾರೆ.

ಕಳೆದ ವರ್ಷ ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದ ಕಲಾಪದ ಚರ್ಚೆಯಲ್ಲಿ ಭಾಗವಹಿಸಿದಂತೆ ಈ ವರ್ಷದ ಬೆಳಗಾವಿ ಅಧಿವೇಶನದಲ್ಲಿ ಭಾಗವಹಿಸುವುದಾಗಿ ಅವರು ಹೇಳಿದ್ದಾರೆ.

ಅಧಿವೇಶನದ ಸಂದರ್ಭದಲ್ಲಿ ಸರ್ಕಾರ ಶಾಸಕರಿಗೆ ಒದಗಿಸುವ ಊಟ, ಉಪಹಾರ, ಚಹಾ ಸೇರಿದಂತೆ ಯಾವುದೇ ತರಹದ ಭತ್ಯೆ, ವಸತಿ ವ್ಯವಸ್ಥೆ ಪಡೆಯುದಿವುಲ್ಲ. ಆದರೆ, ಹೊರಗಿನಿಂದ ಊಟ ತರಿಸಿಕೊಂಡು ಬಳಸಲು ಅನುವು ಮಾಡಿಕೊಡಬೇಕೆಂದು ಅವರು ಪತ್ರದಲ್ಲಿ ಉಲ್ಲೆಖಿಸಿದ್ದಾರೆ.

ಉತ್ತರ ಕರ್ನಾಟಕದ ಸಮಸ್ಯೆ ಮತ್ತು ಬೇಡಿಕೆಗಳಿಗೆ ಸಂಬಂದಿಸಿದಂತೆ ಪ್ರತಿ ವರ್ಷವೂ ನಡೆಸುವ ಚಳಿಗಾಲದ ಅಧಿವೇಶನದಿಂದ ಯಾವುದೇ ಪ್ರಯೋಜನವಾಗುತ್ತಿಲ್ಲ. ಕಳೆದ ಅಧಿವೇಶನದಲ್ಲಿ ನಡೆದ ಚರ್ಚೆಗಳ ವಿಷಯಗಳ ಕುರಿತು ಸರ್ಕಾರ ತೆಗೆದುಕೊಂಡ ಕ್ರಮಗಳ ಬಗ್ಗೆ ರಾಜ್ಯದ ಜನತೆಗೆ ಇದುವರೆಗೂ ತಿಳಿಸಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಎರಡು ವಾರಗಳ ಕಾಲ ಪ್ರವಾಸಕ್ಕೆ ಬಂದಂತೆಯೇ ಆಗುತ್ತಿದೆ ಎಂಬುದು ಮೇಲ್ನೊಟಕ್ಕೆ ಕಾಣುತ್ತಿದೆ. ಕೇವಲ ಚರ್ಚೆ,



ಮಾತುಗಳಿಂದ ಜನ ಕಲ್ಯಾಣ ಅಸಾಧ್ಯ. ಉತ್ತರ ಕರ್ನಾಟಕದ ರೈತರು, ಬಡವರು, ಕಾರ್ಮಿಕರು ಮತ್ತು ಜನಸಾಮಾನ್ಯರು ಹತ್ತು ಹಲವು ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ ಎಂಬ ನಿರೀಕ್ಷೆ ಹೊಂದಿದ್ದಾರೆ. ಕ್ಷೇತ್ರದ ಅಭಿವೃದ್ದಿಗೆ ಸಾಕಷ್ಟು ಅನುದಾನ ತರುತ್ತಾರೆ ಎಂಬ ಆಶಾಭಾವನೆ ಹೊಂದಿರುತ್ತಾರೆ ಎಂದು ಪತ್ರದಲ್ಲಿ ಅವರು ತಿಳಿಸಿದ್ದಾರೆ.

ಮುಂಗಾರು ಮಳೆ ಮತ್ತು ಪ್ರವಾಹದಿಂದ ಲಕ್ಷಾಂತರ ರೈತರ ಕೋಟ್ಯಂತರ ರೂ. ಮೌಲ್ಯದ ಬೆಳೆ ಹಾನಿಯಾಗಿದೆ. ಆದರೂ ರಾಜ್ಯ ಸರ್ಕಾರ ಇದುವರೆಗೆ ಒಂದು ನಯಾಪೈಸೆ ಕೂಡ ಬಿಡುಗಡೆ ಮಾಡಿಲ್ಲ ಎಂದು ಅವರು ಆರೋಪಿಸಿದ್ದಾರೆ.

## ಕಬ್ಬು ಬೆಳೆಗಾರರ ರೀರಿಯಲ್ಲಿ ಮೆಕ್ಕೆಜೋಳ ಬೆಳೆಗಾರರು ಬೀದಿಗಿಳಿಯುತ್ತಾರೆ : ಅಶೋಕ್ ಎಚ್ಚರಿಕೆ

**ಬೆಂಗಳೂರು,ನ.12–** ಕಬ್ಬು ಬೆಳೆಗಾರರು ನಡೆಸಿದ ಹೋರಾಟದ ರೀತಿಯಲ್ಲಿ ಮೆಕ್ಕೆಜೋಳ ಬೆಳೆಗಾರರೂ ಸಹ ಬೀದಿಗಿಳಿದು ಪ್ರತಿಭಟನೆ ಮಾಡುವುದು ಅನಿವಾರ್ಯವಾಗಲಿದೆ. ನಮ ಅನ್ನದಾತರ ಹೋರಾಟಕ್ಕೆ ಬಿಜೆಪಿ ಸಂಪೂರ್ಣ ಬೆಂಬಲ ನೀಡಲಿದೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಎಕ್ಸ್‌ನಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, ಮೆಕ್ಕೆಜೋಳ ರೈತರ ಹೊಟ್ಟೆ ಮೇಲೆ ಹೊಡೆಯುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ! ಎಂದು ಆಕ್ರೊಶ ವ್ಯಕ್ತಪಡಿಸಿದ್ದಾರೆ. ಕಬ್ಬು ಬೆಳೆಗಾರರ ನಂತರ ಈಗ ಮೆಕ್ಕೆಜೋಳ ರೈತರು ಸಂಕಷ್ಟದ ಸುಳಿಗೆ ಸಿಲುಕಿದ್ದಾರೆ. ಆದರೆ ಎಂದಿನಂತೆ ಈ ದರಿದ್ರ ಕಾಂಗ್ರೆಸ್ ಸರ್ಕಾರ ರೈತರ ಸಂಕಷ್ಟಕ್ಕೆ ಕ್ಯಾರೆ ಅನ್ನದೇ ರೈತ ವಿರೋಧಿ ಧೋರಣೆ ಪ್ರದರ್ಶಿಸುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಎಂಎಸ್‌ಪಿಗಿಂತ ಕಡಿಮೆ ಬೆಲೆಯಲ್ಲಿ ಖರೀದಿ,ಗೋವಿನ ಜೋಳ ನಷ್ಟ ಪರಿಹಾರ ನೀಡುವಲ್ಲಿ ತಾರತಮ್ಯ, ಸಮೀಕ್ಷೆಯಲ್ಲಿ ಲೋಪದೋಷದಿಂದ ರೈತರಿಗೆ ನಷ್ಟವಾಗಿದೆ. ಇದಕ್ಕೆಲ್ಲಾ ಯಾರು ಹೊಣೆ ಎಂದು ಪ್ರಶ್ನಿಸಿದರು.ಕಾಂಗ್ರೆಸ್ ಸರ್ಕಾರ ಈ ಕೂಡಲೇ ಮೆಕ್ಕೆಜೋಳ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಬೇಕು, ರೈತರ



ಬೇಡಿಕೆಯಂತೆ, ಎಂಎಸ್‌ಪಿಗಿಂತ ಹೆಚ್ಚಿನ ದರ ಘೋಷಿಸಿ ಖರೀದಿಸಬೇಕು ಎಂದು ಆಗ್ರಹಿಸಿದರು.

ಕೆಎಂಎಫ್ ಸಂಸ್ಥೆಯ ಮೂಲಕ ನೇರವಾಗಿ ರೈತರಿಂದ ಖರೀದಿಸಲು ಆದೇಶಿಸಬೇಕು. ಏಜೆಂಟರು ಮತ್ತು ಮಧ್ಯವರ್ತಿಗಳ ಹಾಕವಳಿಗೆ ಕಡಿವಾಣ ಹಾಕಬೇಕು.ಸಮೀಕ್ಷೆ ಸರಿಯಾಗಿ ನಡೆಸಿ ನ್ಯಾಯಯುತವಾಗಿ ರೈತರಿಗೆ ಬೆಳೆ ನಷ್ಟ ಪರಿಹಾರ ನೀಡಬೇಕು ಎಂದು ಸರ್ಕಾರದ ಮೇಲೆ ಒತ್ತಡ ಹಾಕಿದ್ದಾರೆ.

## ಡೊಳ್ಳು ಕುಣಿತ ಸರಳಾದೇವಿ ಕಾಲೇಜಿಗೆ ಪ್ರಥಮ ಸ್ಥಾನ

**ಬಳ್ಳಾರಿ ನ12–** ಬಳ್ಳಾರಿಯ ಶ್ರೀ ಮಹಾದೇವ ಎಜುಕೇಶನ್ ಆರ್ಟ್ ಅಂಡ್ ಕಲ್ಚರಲ್ ಟ್ರಸ್ಟ್, ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ನೌಕರ ಸಂಘ, ಅಖಿಲ ಕರ್ನಾಟಕ ಸಮಿತಿ ಬಳ್ಳಾರಿ ಇವರ ಸಹಯೋಗದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ರವಿವಾರದಂದು ಕೊಟ್ಟೂರುಸ್ವಾಮಿ ಬಿ.ಎಡ್ ಕಾಲೇಜಿನಲ್ಲಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಲಾಯಿತು. ಜಾನಪದ ಡೊಳ್ಳು ಕುಣಿತ ಸ್ಪರ್ಧೆಯಲ್ಲಿ ಸರಳಾದೇವಿ ಸರಕಾರಿ ಪ್ರಥಮ ದರ್ಜೆ



ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಸ್ಥಾನವನ್ನು ಗಳಿಸಿದ್ದಾರೆ.

## ಎರಡು ತಿಂಗಳೊಳಗಾಗಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ವರದಿ ಸಲ್ಲಿಕೆ : ತಂಗಡಗಿ

**ಬೆಂಗಳೂರು, ನ.12–** ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ನಡೆಸಲಾಗಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಗ್ರಾಮೀಣ ಭಾಗದಲ್ಲಿ ಶೇ.98ರಷ್ಟು ಪೂರ್ಣಗೊಂಡಿದ್ದು, ಗ್ರೇಟರ್ ಬೆಂಗಳೂರಿನಲ್ಲಿ ಬಾಕಿ ಇದೆ. ಎಲ್ಲವನ್ನೂ ಕ್ರೋಢಿಕರಿಸಿ ಎರಡು ತಿಂಗಳ ಒಳಗಾಗಿ ಸರ್ಕಾರಕ್ಕೆ ವರದಿ ಸಲ್ಲಿಕೆಯಾಗಲಿದೆ ಎಂದು ಹಿಂದುಳಿದ ವರ್ಗಗಳ ಅಭಿವೃದ್ಧಿ ಸಚಿವ ಶಿವರಾಜ ತಂಗಡಗಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ಆನ್ ಲೈನ್ ನಲ್ಲಿ ಸಮೀಕ್ಷೆಗೆ ಮಾಹಿತಿ ನೀಡುವ ಗಡುವನ್ನು ಈ ತಿಂಗಳ 30ರವರೆಗೂ ವಿಸ್ತರಣೆ ಮಾಡಲಾಗಿದೆ. ಗ್ರಾಮೀಣ ಭಾಗದಲ್ಲಿ ಸರಾಸರಿ ಶೇ.98ರಷ್ಟು ಸಮೀಕ್ಷೆಯಾಗಿದೆ. ಕೆಲವು ಜಿಲ್ಲೆಗಳಲ್ಲಿ ಪೂರ್ಣಗೊಂಡಿದೆ. ಇನ್ನೂ ಕೆಲವು ಜಿಲ್ಲೆಗಳಲ್ಲಿ ಶೇ.92ರಷ್ಟು ಸಮೀಕ್ಷೆಯಾಗಿದೆ ಎಂದಿದ್ದಾರೆ. ಕಚೇರಿಯಲ್ಲಿ ಕುಳಿತು ಸಮೀಕ್ಷೆ ನಡೆಸಲಾಗಿದೆ ಎಂಬ ಆರೋಪ ನಿರಾಧಾರ. ಜಿಪಿಎಸ್ ಆಧಾರಿತವಾಗಿ ಸಮೀಕ್ಷೆ ನಡೆದಿದೆ. ಸಮೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡಿದ್ದವರು ಮನೆ ಮನೆಗೆ ತೆರಳಿ ಮಾಹಿತಿ ಕಲೆ ಹಾಕಿದ್ದಾರೆ. ಇತಿಹಾಸದಲ್ಲೆ ಈ ರೀತಿ ಕರಾರುವಕ್ಕಾಗಿ ಮಾಹಿತಿ ಕಲೆ ಹಾಕಿದ ಸಮೀಕ್ಷೆ ಬೇರೊಂದಿಲ್ಲ. ಯಾರು ಏನೇ ಟೀಕೆ ಮಾಡಿದರೂ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮಾತ್ರ ಅತ್ಯತ್ತಮವಾಗಿ ನಡೆದಿದೆ ಎಂದು ಸಮರ್ಥಿಸಿಕೊಂಡರು.

ಆನ್ ಲೈನ್ ಸಮೀಕ್ಷೆಯಲ್ಲಿ ಭಾಗವಹಿಸಲು ಇದೇ ತಿಂಗಳ 30ರವರೆಗೂ ಗಡುವು ನೀಡಲಾಗಿದೆ. ಬೆಂಗಳೂರಿನಲ್ಲಿ ಸಮೀಕ್ಷೆ ಪೂರ್ಣಗೊಂಡಿಲ್ಲ. ಉಳಿದ ಎಲ್ಲಾ ಜಿಲ್ಲೆಗಳ ಅಂಕಿ–ಸಂಖ್ಯೆಗಳನ್ನೂ ಕ್ರೋಢಿಕರಿಸುವ ಪ್ರಕ್ರಿಯೆಗಳು ನಡೆಯುತ್ತಿವೆ ಎಂದರು.

ಬೆಂಗಳೂರು ಸೇರಿದಂತೆ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಿದ ಬಳಿಕ ಮುಂದಿನ ರೂಪುರೇಷೆ ಸಿದ್ದ ಪಡಿಸಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಚರ್ಚೆ ಮಾಡಿ, ಒಂದೂವರೆ ಅಥವಾ ಎರಡು ತಿಂಗಳ ಒಳಗಾಗಿ ವರದಿ ಪಡೆದುಕೊಳ್ಳಲಾಗುವುದು ಎಂದರು. ಸಮೀಕ್ಷೆಯಲ್ಲಿ ಭಾಗವಹಿಸಬೇಡಿ ಎಂದು ಕರೆ ನೀಡಿದ್ದ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಸಂಸದ ತೇಜಸ್ವಿ ಸೂರ್ಯ ಅವರಿಗೆ ಮುಖಭಂಗವಾಗಿದೆ. ಸಮೀಕ್ಷೆಯಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿದ್ದ ಇನ್ಫೋಸಿಸ್ ನ ನಾರಾಯಣ ಮೂರ್ತಿ ಹಾಗೂ ಸುಧಾ ಮೂರ್ತಿ ಅವರ ಮಾತುಗಳನ್ನು ಜನ ಕೇಳಿಲ್ಲ. ಎಲ್ಲರೂ ಬುದ್ದಿವಂತರಾಗಿ ಸಮೀಕ್ಷೆಯಲ್ಲಿ ಭಾಗವಹಿಸುವ ಮೂಲಕ ಮಾಹಿತಿಗಳನ್ನು ನೀಡಿದ್ದಾರೆ ಎಂದು ನುಡಿದರು.

ಕುತೂಹಲ ಕೆರಳಿಸಿದ ಸಮೀಕ್ಷೆ: ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ನೇತೃತ್ವದಲ್ಲಿ ನಡೆದ ಸಮೀಕ್ಷೆ ತೀವ್ರ ಕುತೂಲಹ ಕೆರಳಿಸಿದೆ. ರಾಜ್ಯದ ಜನಸಂಖ್ಯೆಯನ್ನು 6.85 ಕೋಟಿ ಎಂದು



ಅಂದಾಜಿಸಲಾಗಿದೆ. ಅದರಲ್ಲಿ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ 6.14 ಕೋಟಿ ಜನರನ್ನು ಸೆಪ್ಟಂಬರ್ 22ರಿಂದ ಅಕ್ಟೊಬರ್ 31ರ ಒಳಗೆ ಮನೆ ಮನೆಗೆ ತೆರಳಿ ಸಮೀಕ್ಷೆಗೆಒಳಪಡಿಸಲಾಗಿದೆ.

ಸುಮಾರು 4,22,258 ಮನೆಗಳಲ್ಲಿ ಸಮೀಕ್ಷೆಗೆ ಮಾಹಿತಿ ನೀಡಲು ನಿರಾಕರಿಸಲಾಗಿದೆ. 34,49,681 ಮನೆಗಳು ಬಾಗಿಲು ಹಾಕಿದ್ದವು ಅಥವಾ ಖಾಲಿ ಇದ್ದವು ಎಂದು ಸಮೀಕ್ಷಾದಾರರು ವರದಿ ಮಾಡಿದ್ದಾರೆ. ಈ ಕಾರಣಕ್ಕೆ ಆನ್ ಲೈನ್ ನಲ್ಲಿ ಸಮೀಕ್ಷೆಯಲ್ಲಿ ಭಾಗವಹಿಸಿ ಮಾಹಿತಿ ನೀಡಬಹುದು ಎಂದು ಆಯೋಗ ನವೆಂಬರ್ 10ರವರೆಗೆ ಕಾಲಾವಕಾಶ ನೀಡಿತ್ತು. ಸ್ವಯಂ ಘೋಷಿತ ಮಾಹಿತಿ ನೀಡುವ ಗಡುವನ್ನು ಇದೇ ತಿಂಗಳ 30ರವರೆಗೂ ವಿಸ್ತರಿಸಲಾಗಿದೆ.


ಆಯೋಗದ ಮಾಹಿತಿ ಪ್ರಕಾರ ಮಂಡ್ಯ ಜಿಲ್ಲೆಯಲ್ಲಿ ಶೇ.110.23, ತುಮಕೂರು ಜಿಲ್ಲೆಯಲ್ಲಿ ಶೇ.106.88, ಹಾವೇರಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಶೇ.103, ಚಿಕ್ಕಮಗಳೂರು, ಉಡುಪಿ ಜಿಲ್ಲೆಗಳಲ್ಲಿ ಶೇ.102, ಗದಗ, ಕೊಪ್ಪಳ, ದಾವಣಗೆರೆ, ಚಾಮರಾಜನಗರ ಜಿಲ್ಲೆಗಳಲ್ಲಿ ಶೇ.100, ಬಾಗಲಕೋಟೆ, ಶಿವಮೊಗ್ಗ, ಉತ್ತರ ಕನ್ನಡ, ಹಾಸನ ಜಿಲ್ಲೆಗಳಲ್ಲಿ ಶೇ.99, ಬೆಂಗಳೂರು ಗ್ರಾಮಾಂತರ, ರಾಯಚೂರು ಜಿಲ್ಲೆಗಳಲ್ಲಿ ಶೇ.98, ಬಳ್ಳಾರಿಯಲ್ಲಿ ಶೇ.97, ಕಲ್ಬುರ್ಗಿ, ಕೊಡಗು, ಬೆಳಗಾವಿ, ಮೈಸೂರು ಜಿಲ್ಲೆಗಳಲ್ಲಿ ಶೇ.96, ವಿಜಯಪುರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಶೇ.94, ಯಾದಗಿರ್‌ನಲ್ಲಿ ಶೇ.93, ದಕ್ಷಿಣ ಕನ್ನಡ, ವಿಜಯನಗರ ಜಿಲ್ಲೆಗಳಲ್ಲಿ ಶೇ.92, ಧಾರವಾಡ, ಬೀದರ್, ಕೋಲಾರ ಜಿಲ್ಲೆಗಳಲ್ಲಿ ಶೇ.91, ಬೆಂಗಳೂರು ನಗರ ಜಿಲ್ಲೆಯಲ್ಲಿ ಶೇ.87, ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಶೇ.86ರಷ್ಟು ಸಮೀಕ್ಷೆಯಾಗಿದೆ.

ಬೆಂಗಳೂರು ಹೊರತು ಪಡಿಸಿ ರಾಜ್ಯಾದ್ಯಂತ ಒಟ್ಟು 1,46,48,053 ಮನೆಗಳಲ್ಲಿ 5,52,90,296 ಜನರನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ ಎಂದು ಆಯೋಗ ತಿಳಿಸಿದೆ. ಇಂದು ಸಂಜೆ ಸಚಿವರು ಆಯೋಗದ ಪ್ರಮುಖರ ಜೊತೆಗೆ ಸಭೆ ನಡೆಸಲಿದ್ದು ವರದಿ ಸಲ್ಲಿಕೆಗೆ ಸಮಯ ನಿಗದಿ ಪಡಿಸಲಿದ್ದಾರೆ.

## ಕಾಲುವೆಯಲ್ಲಿ ಜಾರಿ ಬಿದ್ದು ಮೂವರ ಸಾವು:ಮೂರು ಶವ ಪತ್ತೆ

**ವಿಜಯಪುರ, ನ.12–**ಕಾಲುವೆಯಲ್ಲಿ ಜಾರಿ ಬಿದ್ದು ಓರ್ವ ಯುವತಿ ಸೇರಿ ಇಬ್ಬರು ಬಾಲಕರು ಮೃತಪಟ್ಟ ಘಟನೆ ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲೂಕಿನ ಶಿರೋಳ ಗ್ರಾಮದ ಬಳಿಯ ಕೆಬಿಜೆಎನ್‌ಎಲ್ ಎಡ ದಂಡೆ ಕಾಲುವೆಯಲ್ಲಿ ಸಂಭವಿಸಿದೆ.

ಕಾಲುವೆಯಲ್ಲಿ ಕಾಲು ಜಾರಿ ಬಿದ್ದು ಮೃತರ ಮೂರು ಶವಗಳು ಪತ್ತೆಯಾಗಿವೆ.ನಿನ್ನೆ ಸಂಜೆ ಸಂತೋಷನ ಶವ ಹಾಗೂ ಇಂದು ಬೆಳಗ್ಗೆ ಇನ್ನಿಬ್ಬರ ಶವಗಳು ಪತ್ತೆಯಾಗಿವೆ. ಒಂದೇ ಕುಟುಂಬದ ಇಬ್ಬರು ಬಾಲಕರು ಹಾಗೂ ಓರ್ವ ಯುವತಿ ನಿನ್ನೆ ಕಾಲುವೆಯಲ್ಲಿ ಕಾಲು ಜಾರಿ ಬಿದ್ದು ನಾಪತ್ತೆಯಾಗಿದ್ದರು. ಯುವತಿ ಬಟ್ಟೆ ತೊಳೆಯಲು ಹೋದಾಗ ಈ ಅವಘಡ ಸಂಭವಿಸಿತ್ತು. ಮುದ್ದೇಬಿಹಾಳ ಪಟ್ಟಣದ ಆಶ್ರಯ ಕಾಲೋನಿಯ ಸುಡಗಾಡು



ಸಿದ್ದ ಸಮುದಾಯದ ಯುವತಿ ಬಸಮ್ಮ ಕೊಣ್ಣೂರ (20) ಸಂತೋಷ ಕೊಣ್ಣೂರು (18) ಹಾಗೂ ರವಿ ಕೊಣ್ಣೂರು (17) ಕಾಲುವೆ ನೀರಲ್ಲಿ ನಾಪತ್ತೆಯಾಗಿದ್ದರು. ಮೂವರ ಶೋಧಕ್ಕೆ ಅಗ್ನಿಶಾಮಕ ದಳ ಸಿಬ್ಬಂದಿಗಳು ಮುಂದಾಗಿದ್ದರು.ಪೊಲೀಸರು ಹಾಗೂ ಅಗ್ನಿಶಾಮಕದಳ ಸಿಬ್ಬಂದಿ ನಿರಂತರವಾಗಿ ನೆನ್ನೆಯಿಂದ ಶವಗಳ ಶೋಧನಾ ಕಾರ್ಯದಲ್ಲಿ ತೊಡಗಿದ್ದರು. ಮೂರು ಶವಗಳನ್ನು ಹೊರ ತೆಗೆಯಲಾಗಿದೆ.ಮುದ್ದೇಬಿಹಾಳ ಪೊಲೀಸ್ ಠಾಣಾ ವ್ಯಾಪ್ತಿ ಘಟನೆ ನಡೆದಿದೆ.

ಯುವ ಮಾರ್ಗ



## ನ.14ರ ಪೋಷಕ–ಶಿಕ್ಷಕರ ಮಹಾಸಭೆಯಲ್ಲಿ ಭಾಗವಹಿಸಲು ಡಿಡಿಪಿಐ ಮನವಿ

**ರಾಯಚೂರು,ನ.12–**ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನವೆಂಬರ್ 14ರಂದು ಮಕ್ಕಳ ದಿನಾಚಾರಣೆಯ ಪ್ರಯುಕ್ತ ಜಿಲ್ಲಾದ್ಯಂತ ಏಕಕಾಲದಲ್ಲಿ 2025–26ನೇ ಸಾಲಿನ ಪೋಷಕ–ಶಿಕ್ಷಕರ ಮಹಾಸಭೆಯನ್ನು ಜಿಲ್ಲೆಯ ಎಲ್ಲಾ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಆಯೋಜಿಸಲು ಉದ್ದೇಶಿಸಲಾಗಿದ್ದು, ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪೋಷಕರು ಭಾಗವಹಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಕೋರಿದ್ದಾರೆ.

ಶಾಲೆಯು ಸಮುದಾಯದ ಒಂದು ಭಾಗವಾಗಿದ್ದು, ಭಾಗೀದಾರರು ಹಾಗೂ ಪೋಷಕರ ವಿಶ್ವಾಸ ಮತ್ತು ಸಹಕಾರವು ಸರ್ಕಾರಿ ಶಾಲಾ–ಕಾಲೇಜುಗಳನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುತ್ತವೆ. ರಾಷ್ಟ್ರ ನಿರ್ಮಾಣ ಮತ್ತು ಚೈತನ್ಯಶೀಲ ಸಮಾಜ ನಿರ್ಮಾಣದ ಸಹಕಾರಕ್ಕಾಗಿ ಅರ್ಹ ವಯೋಮಾನದ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗಿ ನಿರಂತರವಾಗಿ ಹಾಜರಾಗಿ ಗುಣಮಟ್ಟದ ಶಿಕ್ಷಣ ಪಡೆಯುವುದು ಅತ್ಯಗತ್ಯವಾಗಿರುತ್ತದೆ. ಮಕ್ಕಳ ಕಲಿಕೆಯು ಶಾಲೆ, ಮನೆ ಮತ್ತು ಸಮಾಜಗಳ ನಡುವೆ ನಿರಂತರ ಸಂಪರ್ಕ ಕಲ್ಪಿಸುತ್ತದೆ.

ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪೋಷಕರ ಪಾತ್ರ ಅತ್ಯಂತ ಪ್ರಮುಖವಾಗಿದ್ದು, ಅವರನ್ನು ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ. ವಿದ್ಯಾರ್ಥಿಗಳ ಗುಣಮಟ್ಟದ ಶಿಕ್ಷಣಕ್ಕೆ ಪೂರಕವಾಗಿ ಸರ್ಕಾರದಿಂದ ಅನುಷ್ಠಾನಗೊಳಿಸಲಾಗುತ್ತಿರುವ ಉಪಕ್ರಮಗಳು ಪೋಷಕರು, ಶಿಕ್ಷಕರು ಹಾಗೂ ಸ್ಥಳೀಯ ಜನಪ್ರತಿನಿಧಿಗಳ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾದ ವಾತಾವರಣ ನಿರ್ಮಿಸುವುದು ಪೋಷಕ–ಶಿಕ್ಷಕ ಸಭೆಗಳ ಉದ್ದೇಶವಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪೋಷಕರು, ಸ್ಥಳೀಯ ಜನಪ್ರತಿನಿಧಿಗಳ ಸಕ್ರಿಯವಾಗಿ ಭಾಗವಹಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯ ಮೂಲಕ ಕೋರಿದ್ದಾರೆ.

## ನವೆಂಬರ್ 14ರಂದು ವಿದ್ಯುತ್ ವ್ಯತ್ಯಯ

**ರಾಯಚೂರು,ನ.12–**ಜೆಸ್ಕಾಂ ನಗರ–02ರ ವ್ಯಾಪ್ತಿಯ ಎಪಿಎಮ್ಸಿ 11ಕೆವಿ ಉಪ ಕೇಂದ್ರದಲ್ಲಿ ಹಳೆಯ 11ಕೆವಿ ಸರ್ಕ್ಯೂಟ್ ಬದಲಾವಣೆ ಕಾಮಗಾರಿಯನ್ನು ಬ್ಯಾಂಕ್ 1, 2 ನಲ್ಲಿ ಹಮ್ಮಿಕೊಂಡಿರುವ ಪ್ರಯುಕ್ತ ನವೆಂಬರ್ 14ರ ಬೆಳಿಗ್ಗೆ 09 ರಿಂದ ಸಂಜೆ 4 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕಾರಿಸುವಂತೆ ಕೋರಲಾಗಿದೆ.

ಅಂದು ಬೆಳಿಗ್ಗೆ 09 ರಿಂದ ನಗರದ ಮಂಚಲಾಪುರ ರಸ್ತೆ, ಟೈಪಾನ್ ರಸ್ತೆಯ ಇಂಡಸ್ಟ್ರೀಯಲ್ ಏರಿಯಾ, ರಿಮ್ಸ್ ಆಸ್ಪತ್ರೆ, ಓಪೆಕ್ ಆಸ್ಪತ್ರೆ, ಎಲ್.ಬಿ.ಎಸ್. ನಗರ, ಪೊಲೀಸ್ ಕಾಲೋನಿ, ಅಲ್ಲಮಪ್ರಭು ಕಾಲೋನಿ, ಗಂಜ್ ಏರಿಯಾ, ಚಂದ್ರಬಂಡ ರಸ್ತೆ, ಹುಂಡೇಕರ್ ಕಾಲೋನಿ, ಎನ್‌ಜಿಓ ಕಾಲೋನಿ, ಆಶ್ರಯ ಕಾಲೋನಿ, ಯರಮರಸ್ ಕ್ಯಾಂಪ್, ಪೋತಗಲ್, ಅಮರಾವತಿ, ಯರಮರಸ್ ಕೈಗಾರಿಕಾ ಪ್ರದೇಶ, ನಂದಿನಿ ಹಾಲು ಡೈರಿ, ಸರಕಾರಿ ಎಂಜಿಯಿಯರ್ ಕಾಲೇಜ್, ಎಸ್.ಎಲ್.ಎನ್. ಇಂಜಿನಿಯರಿಂಗ್ ಕಾಲೇಜ್, ಐ.ಐ. ಐಟಿ ಕಾಲೇಜ್, ಯರಮರಸ್ ಕ್ಯಾಂಪ್ ಸೇರಿದಂತೆ ಸುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಹೆಚ್ಚಿನ ಮಾಹಿತಿಗಾಗಿ ಗ್ರಾಹಕರ ಸೇವಾ ಕೇಂದ್ರದ ದೂರವಾಣಿ ಸಂಖ್ಯೆ: 08532–226386, 08532–231999ಗೆ ಸಂಪರ್ಕಿಸುವಂತೆ ಜೆಸ್ಕಾಂ ನಗರ–2ರ ಕಾರ್ಯ ಪಾಲನೆ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅರೋಲಿ ಹುಲಿಗೆಮ್ಮದೇವಿ ದೇವಸ್ಥಾನಕ್ಕೆ ಪ್ರಧಾನ ಅರ್ಚಕರ ನೇಮಕ್ಕೆ ಅರ್ಜಿ ಆಹ್ವಾನ

**ರಾಯಚೂರು,ನ.12–**ಜಿಲ್ಲೆಯ ಮಾನ್ವಿ ತಾಲ್ಲೂಕಿನ ಅರೋಲಿ ಗ್ರಾಮದ ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ ಪ್ರಧಾನ ಅರ್ಚಕರನ್ನು ನೇಮಕ ಮಾಡಲು ಅರ್ಜಿ ಆಹ್ವಾನಿಸಲಾಗಿದೆ ಎಂದು ದೇವಸ್ಥಾನದ ಆಡಳಿತಾಧಿಕಾರಿಗಳು ಹಾಗೂ ಮಾನ್ವಿ ತಹಸೀಲ್ದಾರರು ತಿಳಿಸಿದ್ದಾರೆ.

ಪ್ರಧಾನ ಅರ್ಚಕರ ನೇಮಕಕ್ಕೆ ಈ ಹಿಂದೆ ಅರ್ಜಿ ಆಹ್ವಾನಿಸಲಾಗಿತ್ತು. ಉದಯಕುಮಾರ ಪೂಜಾರಿ ತಂದೆ ಮಲ್ಲಿಕಾರ್ಜುನ್ ಪೂಜಾರಿ ಸಾ.ಅರೋಲಿ ಮತ್ತು ಶ್ರೀ ರಾಜು ಪೂಜಾರಿ ತಂದೆ ಹುಲಿಗೆಪ್ಪ ಪೂಜಾರಿ ಸಾ. ಅರೋಲಿ ಹಾಗೂ ಇನ್ನಿತರರ ಅರ್ಜಿಗಳನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆ ಮತ್ತು ಧರ್ಮದಾಯ ದತ್ತಿಗಳ ಕಾಯ್ದೆ 1997ರನ್ವಯ ಸಕ್ಷೆನ್ 17ರ ಪ್ರಕಾರ ತಿರಸ್ಕರಿಸಿ ಆದೇಶ ಹೊರಡಿಸಿದ್ದು, ಆದ್ದರಿಂದ ಪುನಃ ಅರೋಲಿ ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ ಪ್ರಧಾನ ಅರ್ಚಕರನ್ನು ನೇಮಕಕ್ಕೆ ಜಿಲ್ಲಾಧಿಕಾರಿಗಳು ಸೂಚಿಸಿದ್ದು, ಆಸಕ್ತರು ಡಿಸೆಂಬರ್ 01ರ ಮಧ್ಯಾಹ್ನ 03 ಗಂಟೆಯೊಳಗಾಗಿ ತಹಶೀಲ್ದಾರ ಕಾರ್ಯಲಯ ಮಾನ್ವಿಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ದಾಖಲೆಗಳು: ಹಿಂದೂ ಧಾರ್ಮಿಕ ಸಂಸ್ಥೆ ಮತ್ತು ಧರ್ಮಾದಾಯಿ ದತ್ತಿ ಇಲಾಖೆ ಬೆಂಗಳೂರು ಇವರಿಂದ ಪಡೆದ ತರಬೇತಿ ಪ್ರಮಾಣ ಪತ್ರ, ಕುಟುಂಬ ವಂಶವಳಿ ಪ್ರಮಾಣ ಪತ್ರ, 1965 ರಿಂದ ಇಲ್ಲಿಯವರೆಗಿನ ಇನಾಂ ಪಹಣಿ, ಮೊಟೇಷನ್ ಪ್ರತಿ., ವಿದ್ಯಾಭ್ಯಾಸದ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳನ್ನು ಸಲ್ಲಿಸಬೇಕು ಎಂದು ದೇವಸ್ಥಾನ ಆಡಳಿತಾಧಿಕಾರಿಗಳು ಹಾಗೂ ಮಾನ್ವಿ ತಹಶೀಲ್ದಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಸತಿ ನಿಲಯಗಳಿಗೆ ಗುತ್ತಿಗೆದಾರರಿಂದ ಆಹಾರ ಸಾಮಾಗ್ರಿಗಳ ಪೂರೈಕೆ ಮಾಡುತ್ತಿಲ್ಲ : ಪ್ರಭುರಾಜ್ ಕೊಡ್ಲಿ

**ಯುವ ಮಾರ್ಗ ಸುದ್ದಿ**




**ಮಾನ್ವಿ,ನ.12–**ಪಟ್ಟಣದ ಪತ್ರಿಕಾ ಭವನದಲ್ಲಿ ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟದ ರಾಜ್ಯ ಸಂಚಾಲಕರಾದ ಪ್ರಭುರಾಜ್ ಕೋಡ್ಲಿ ಮಾತನಾಡಿ ಸರ್ಕಾರವು ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ಪರಿಶಿಷ್ಟಜಾತಿ ಸಮುದಾಯಗಳ ಮಕ್ಕಳು ಉತ್ತಮ ಶಿಕ್ಷಣ ಪಡೆಯುವ ಮೂಲಕ ತಮ್ಮ ಜೀವನವನ್ನು ಉನ್ನತವಾಗಿ ರೂಪಿಸಿಕೊಳ್ಳಲಿ ಎನ್ನುವ ಉದ್ದೇಶದಿಂದ ರಾಜ್ಯದಲ್ಲಿ ಪರಿಶಿಷ್ಟಜಾತಿ ಸಮುದಾಯಗಳ ಮಕ್ಕಳಿಗಾಗಿ ಸಮಾಜ ಕಲ್ಯಾಣ ಇಲಾಖೆಯ ಮೂಲಕ ವಸತಿ ನಿಲಯಗಳನ್ನು ಪ್ರಾರಂಭಿಸಿ ಶಿಕ್ಷಣ ನೀಡುವುದಕ್ಕೆ ಅನುಕೂಲ ಕಲ್ಪಸಿದೆ ಜಿಲ್ಲೆಯಲ್ಲಿನ 80 ಕ್ಕೂ ಹೆಚ್ಚು ಪರಿಶಿಷ್ಟಜಾತಿ ವಸತಿ ನಿಲಯಗಳಲ್ಲಿ ಅಂದಾಜು 20 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು,ವಿದ್ಯಾರ್ಥಿನಿಯರು ಶಿಕ್ಷಣ ಪಡೆಯುತ್ತಿದ್ದಾರೆ ಅದ್ದರೆ ಈ ವಸತಿ ನಿಲಯಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುವುದಕ್ಕಾಗಿ ಗುತ್ತಿಗೆ ಪಡೆದಿರುವ ಚಿಕ್ಕಬಳ್ಳಾಪುರ ಮೂಲದ ಶ್ರೀ ಶಿರಡಿಸಾಯಿ ಪ್ರಾವಿಜನ್ ಸ್ಟೋರ್ ರವರಿಂದ ಕಳೆದ 4 ತಿಂಗಳಿಂದ ಆಹಾರಸಾಮಾಗ್ರಿಗಳ ಪೂರೈಕೆ ಮಾಡದೆ ಇರುವುದರಿಂದ ವಸತಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ನಿತ್ಯ ಗುಣಮಟ್ಟದ ಪೌಷ್ಟಿಕ ಆಹಾರ ದೊರೆಯುತ್ತಿಲ್ಲ ಅದ್ದರಿಂದ ಸಮಾಜ ಕಲ್ಯಾಣ ಇಲಾಖೆಯ ಉನ್ನತ ಅಧಿಕಾರಿಗಳು ಪರಿಶೀಲನೆ ನಡೆಸಿ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಬೇಕು ಹಾಗೂ ವಸತಿ ನಿಲಯಗಳಿಗೆ ಆಹಾರ ಸಾಮಾಗ್ರಿಗಳನ್ನು ಸರಬರಾಜು ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕು .ಎಸ್.ಇ.ಪಿ/ಟಿ.ಎಸ್.ಪಿ. ಅನುದಾನದ ಸಮರ್ಪಕ ಬಳಕೆಗೆ ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಳ್ಳಬೇಕು. ನಿವೇಶನ ರಹಿತ ಬಡ ದಲಿತ ಕುಟುಂಬಗಳಿಗೆ ನಿವೇಶನ ಹಂಚಿಕೆ ಮಾಡಬೇಕು, ವಸತಿ ನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಬೇಕು,ತಾಲೂಕಿನಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ನಿಲಯ,ಬಾಬು ಜಗಜೀವನ ಭವನ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು.ರಾಜ್ಯ ಹೆದ್ದಾರಿ–23 ರಸ್ತೆ ಕಾಮಾಗಾರಿ ಕಳಪೆ ಗುಣಮಟ್ಟದಲ್ಲಿ ನಿರ್ಮಾಣ ಮಾಡಲಾಗುತ್ತಿದ್ದು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ತಾಲೂಕಿನಲ್ಲಿನಿರ್ಮಾಣ ಮಾಡಲಾಗುತ್ತಿರುವ ಪವರ್ ಗ್ರೀಡ್ ನಿರ್ಮಾಣಕ್ಕಾಗಿ ಖರೀದಿಸಲಾಗುತ್ತಿರುವ ಭೂಮಿಗೆ ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಬೆಲೆ ನೀಡಲಾಗುತ್ತಿರುವ ಕುರಿತು ತನಿಖೆ ನಡೆಸಬೇಕು. ಇಲ್ಲದೆ ಇದಲ್ಲಿ ಈ ಕುರಿತು ಲೋಕಯುಕ್ತರು ಮತ್ತು ಎಸ್.ಸಿ,ಎಸ್.ಟಿ. ಅಯೋಗ ಹಾಗೂ ಸರ್ಕಾರಕ್ಕೆ ದೂರು ಸಲ್ಲಿಸಲಾಗುವುದು ಹಾಗೂ ಹೋರಾಟ ನಡೆಸಲಾಗುವುದು.ಎಂದು ತಿಳಿಸಿದರು.

ಜಯರಾಜ್ ಕೊಡ್ಲಿ,ಶಾಮಸಿಂಗ್,ಸುರೇಶ ಕಾತರಕಿ, ಪ್ರಭು ಕೊಟ್ನೆಕಲ್,ಯಲ್ಲಪ್ಪ ಚೀಕಲಪರ್ವಿ ಇದ್ದರು.

## ಬಾಲಕರ ವಸತಿ ನಿಲಯಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ ಭೇಟಿ: ಎಸ್‌ಎಸ್‌ಎಲ್ಸಿ ವಿದ್ಯಾರ್ಥಿಗಳೊಂದಿಗೆ ಪರೀಕ್ಷೆ ಕುರಿತು ಸಂವಾದ

**ಯುವ ಮಾರ್ಗ ಸುದ್ದಿ**



**ಮಾನ್ವಿ,ನ.12–**ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದ ಸಮೀಪವಿರುವ ಸಮಾಜಕಲ್ಯಾಣ ಇಲಾಖೆಯ ಬಾಲಕರ ಮೆಟ್ರಿಕ್ ಪೂರ್ವ ವಸತಿ ನಿಲಯಕ್ಕೆ ತಾಲೂಕ ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ ದೊಡ್ಡಮನಿ ಮಂಗಳವಾರ ಸಂಜೆ ಭೇಟಿ ನೀಡಿ ವಸತಿ ನಿಲಯ ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸಿದರು.

ಎಸ್‌ಎಸ್‌ಎಲ್ಸಿ ವಿದ್ಯಾರ್ಥಿಗಳು ಮುಂಬರುವ ಪರೀಕ್ಷೆಯನ್ನು ಎದುರಿಸುವ ನಿಟ್ಟಿನಲ್ಲಿ ಅಭ್ಯಾದ ಕುರಿತು ಪೂರ್ವ ತಯಾರಿ ಯಾವ ರೀತಿಯಲ್ಲಿ ಮಾಡಿಕೊಳ್ಳಬೇಕು. ಹಾಗೂ ನಿರಂತರ ಅಭ್ಯಾಸದಿಂದ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಬಹುದಾಗಿದೆ. ವಸತಿ ನಿಲಯದ ಸೌಲಭ್ಯಗಳನ್ನು ಸರಿಯಾಗಿ ಸದುಪಯೋಗ ಮಾಡಿಕೊಳ್ಳಬೇಕಿದೆ. ಎಸ್‌ಎಸ್‌ಎಲ್ಸಿ ವಿದ್ಯಾರ್ಥಿಗಳ ಮೇಲೆ ತಂದೆ ತಾಯಿಗಳು ತಮ್ಮ ಮೇಲೆ ಇಟ್ಟುರುವ ವಿಶ್ವಾಸ ನಂಬಿಕೆಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಎಲ್ಲಾ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿ ಉತ್ತೀರ್ಣರಾಗಬೇಕಿದೆ. ಅ ಮೂಲಕ ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಎಸ್‌ಎಸ್‌ಎಲ್ಸಿ ಫಲಿತಾಂಶ ಉತ್ತಮವಾಗಿ ನೀಡುವ ಮೂಲಕ ತಾಲೂಕಿಗೆ ಮತ್ತು ಜಿಲ್ಲೆಗೆ ಕೀರ್ತಿಯನ್ನು ತರಬೇಕಿದೆ. ಎಸ್‌ಎಸ್‌ಎಲ್ಸಿ ಫಲಿತಾಂಶ ಸುಧಾರಣೆಗಾಗಿ ಶಿಕ್ಷಣ ಇಲಾಖೆಯು ಕೈಗೊಂಡಿರುವ ಶೈಕ್ಷಣಿಕ ಕ್ರಮಗಳ ಕುರಿತು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿ ವಸತಿ ನಿಲಯದಲ್ಲಿನ ಸೌಕರ್ಯಗಳ ಕುರಿತು ಮಾಹಿತಿ ಪಡೆದರು.

ನಂತರ ವಸತಿ ನಿಯಲ ಮೇಲ್ವಿಚಾರಕರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳ ಹಾಗೂ ಆಹಾರ ಮತ್ತು ಮೂಲಭೂತ ಸೌಕರ್ಯಗಳ ಕುರಿತು ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ಕ್ಷೇತ್ರ ಸಮನ್ವಯ ಅಧಿಕಾರಿ ಕುಬೇರಪ್ಪ, ನೌಕರರ ಸಂಘದ ತಾಲೂಕ ಅಧ್ಯಕ್ಷ ಸುರೇಶ ಕುರ್ಡಿ, ಪ್ರ.ಕಾರ್ಯದರ್ಶಿ ಹಂಪಣ್ಣ ಚಂಡೂರು, ಬಾಲಕರ ಪ್ರೌಢಶಾಲೆಯ ಪ್ರಭಾರ ಉಪ ಪ್ರಾಂಶುಪಾಲ ಮಹಿಬೂಬ್ ಪಾಷಾ, ಸಿಆರ್ಪಿ ಹಾಲೇಶ, ಮಹೇಶ ಹಾಗೂ ವಸತಿ ನಿಲಯ ಮೇಲ್ವಿಚಾರಕರಾದ ಹುಸೇನಿ ಬಡಿಗೇರ ಉಪಸ್ಥಿತರಿದ್ದರು.

## ಜವಳಗೇರಾದಲ್ಲಿ ವಿಶ್ವ ನ್ಯೂಮೋನಿಯಾ ದಿನಾಚರಣೆ: ಗಂಭೀರ ಆರೋಗ್ಯ ಸಮಸ್ಯೆಯ ಬಗ್ಗೆ ಜಾಗೃತಿ

**ಯುವ ಮಾರ್ಗ ಸುದ್ದಿ**



**ಜವಳಗೇರಾ,ನ.12–**ಜವಳಗೇರಾ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಬರುವ ತಾಯಿ ಮತ್ತು ಮಕ್ಕಳ ಆಸ್ಪತ್ರೆ (MCH ಆಸ್ಪತ್ರೆ)ಯಲ್ಲಿ ವಿಶ್ವ ನ್ಯೂಮೋನಿಯಾ ದಿನಾಚರಣೆಯನ್ನು ಇತ್ತೀಚೆಗೆ ಆಚರಿಸಲಾಯಿತು. ಈ ಸಂದರ್ಭದಲ್ಲಿ ತಾಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು, ವೈದ್ಯರು ಮತ್ತು ಆರೋಗ್ಯ ಕಾರ್ಯಕರ್ತರು ಪಾಲ್ಗೊಂಡು ನ್ಯೂಮೋನಿಯಾ ಕಾಯಿಲೆಯ ಲಕ್ಷಣಗಳು, ಅಪಾಯಗಳು ಮತ್ತು ತಕ್ಷಣದ ವೈದ್ಯಕೀಯ ಚಿಕಿತ್ಸೆಯ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಸಿಂಧನೂರಿನ ತಾಲೂಕು ಆರೋಗ್ಯಾಧಿಕಾರಿಗಳಾದ ಡಾ.ಅಯ್ಯನಗೌಡ ಅವರು, ನ್ಯೂಮೋನಿಯಾ ಎಂದರೆ ಶ್ವಾಸಕೋಶದ ಸೋಂಕು. ಇದು ಬ್ಯಾಕ್ಟೀರಿಯಾ, ವೈರಸ್ ಅಥವಾ ಶಿಲೀಂಧ್ರಗಳಿಂದ ಉಂಟಾಗಬಹುದು. "ಈ ಸೋಂಕು ಶ್ವಾಸಕೋಶದ ಗಾಳಿಯ ಚೀಲಗಳಲ್ಲಿ ದ್ರವ ಅಥವಾ ಕೀವು ತುಂಬಲು ಕಾರಣವಾಗುತ್ತದೆ. ಇದರ ಸಾಮಾನ್ಯ ಲಕ್ಷಣಗಳೆಂದರೆ ಕೆಮ್ಮು (ಕಫದೊಂದಿಗೆ ಅಥವಾ ಇಲ್ಲದೆ), ಜ್ವರ, ಶೀತ ಮತ್ತು ಉಸಿರಾಟದ ತೊಂದರೆ" ಎಂದು ಅವರು ವಿವರಿಸಿದರು.

ನ್ಯೂಮೋನಿಯಾದ ಅಪಾಯದಲ್ಲಿರುವವರ ಕುರಿತು ಅವರು ಎಚ್ಚರಿಕೆ ನೀಡಿದರು. ಶಿಶುಗಳು ಮತ್ತು ಚಿಕ್ಕ ಮಕ್ಕಳು, 65 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಾದವರು, ದುರ್ಬಲ ಪ್ರತಿರಕ್ಷಣಾ ವ್ಯವಸ್ಥೆ ಹೊಂದಿರುವವರು ಹಾಗೂ ಇತರ ದೀರ್ಘಕಾಲದ ಆರೋಗ್ಯ ಸಮಸ್ಯೆಗಳಿರುವವರು ಈ ಕಾಯಿಲೆಗೆ ಸುಲಭವಾಗಿ ತುತ್ತಾಗಬಹುದು. ವೈರಸ್‌ಗಳು ಸಾಮಾನ್ಯವಾಗಿ ಶ್ವಾಸಕೋಶವನ್ನು ದುರ್ಬಲಗೊಳಿಸಿ, ಬ್ಯಾಕ್ಟೀರಿಯಾದಿಂದ ಉಂಟಾಗುವ ದ್ವಿತೀಯ ನ್ಯೂಮೋನಿಯಾಗೆ ಕಾರಣವಾಗಬಹುದು ಎಂದು ಡಾ. ಅಯ್ಯನಗೌಡ ತಿಳಿಸಿದರು.

MCH ಆಸ್ಪತ್ರೆಯ ಮಕ್ಕಳ ತಜ್ಞರಾದ ಡಾ. ಶ್ರುತಿ ಅವರು ನ್ಯೂಮೋನಿಯಾದ ಲಕ್ಷಣಗಳನ್ನು ಮತ್ತಷ್ಟು ವಿವರವಾಗಿ ತಿಳಿಸಿದರು. ಕೆಮ್ಮು, ಜ್ವರ, ಉಸಿರಾಟದ ತೊಂದರೆ, ಬೆವರು, ಚಳಿಯಾಗುವಿಕೆ, ಆಯಾಸ ಮತ್ತು ಶಕ್ತಿಯ ಕೊರತೆ, ವಾಕರಿಕೆ, ವಾಂತಿ ಅಥವಾ ಅತಿಸಾರ, ಸ್ನಾಯು ನೋವು, ತಲೆನೋವು ಮತ್ತು ಗೊಂದಲ ಇದರ ಲಕ್ಷಣಗಳಲ್ಲಿ ಸೇರಿವೆ ಎಂದರು.

ಡಾ. ಶ್ರುತಿ ಅವರು ಗಂಭೀರ ಲಕ್ಷಣಗಳ ಬಗ್ಗೆ ಎಚ್ಚರಿಕೆ ನೀಡಿದರು ತುಟಿಗಳು ಅಥವಾ ಬೆರಳುಗಳ ತುದಿಯಲ್ಲಿ ನೀಲಿ ಬಣ್ಣ ಕಾಣಿಸಿಕೊಳ್ಳುವುದು (ಆಮ್ಲಜನಕದ ಕೊರತೆ), ವೇಗವಾದ ಉಸಿರಾಟ (ಮಕ್ಕಳಲ್ಲಿ ಮತ್ತು ತೀವ್ರ ಪ್ರಕರಣಗಳಲ್ಲಿ), ಉಸಿರಾಟದ ಸಮಯದಲ್ಲಿ ಗೊಣಗಾಟದ ಶಬ್ದಗಳು (ಶಿಶುಗಳಲ್ಲಿ),ಮೂಗಿನ ಹೊಳ್ಳೆಗಳು ಅಗಲವಾಗುವುದು (ಉಸಿರಾಡಲು ತೊಂದರೆ ಪಡುತ್ತಿರುವುದು).

"ಯಾವುದೇ ವ್ಯಕ್ತಿಯಲ್ಲಿ ಈ ಮೇಲಿನ ಲಕ್ಷಣಗಳು ಕಂಡುಬಂದರೆ, ವಿಶೇಷವಾಗಿ ಲಕ್ಷಣಗಳು ಉಲ್ಬಣಗೊಂಡರೆ ಅಥವಾ ಉಸಿರಾಟದಲ್ಲಿ ತೊಂದರೆ ಉಂಟಾದರೆ, ಇದು ಗಂಭೀರ ತೊಡಕುಗಳಿಗೆ ಕಾರಣವಾಗುವ ಸಾಧ್ಯತೆ ಇರುವುದರಿಂದ ತಕ್ಷಣ ವೈದ್ಯಕೀಯ ಸಹಾಯ ಪಡೆಯುವುದು ಮುಖ್ಯ" ಎಂದು ಡಾ. ಶ್ರುತಿ ಒತ್ತಿ ಹೇಳಿದರು.ಈ ಸಂದರ್ಭದಲ್ಲಿ ಗೀತಾ (BHEO, THO ಕಚೇರಿ), ರಾಮಾಂಜನಕುಮಾರ್ (RKSK ಕೌನ್ಸಲರ್, TGH), ರೇಖಾ (PHCO, PHC ಜವಳಗೇರಾ), ಎಲ್ಲಾ ಆಶಾ ಕಾರ್ಯಕರ್ತೆಯರು, ತಾಯಂದಿರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

## ಕಾರ್ಯಕ್ರಮ ಸಂಯೋಜಕರ ಹುದ್ದೆಗೆ ಅರ್ಜಿ ಆಹ್ವಾನ

**ರಾಯಚೂರು,ನ.12–** ಇಲ್ಲಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಜಿಲ್ಲೆಯಲ್ಲಿ ಜಿಲ್ಲಾ ಬಾಲ ಭವನ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಗುತ್ತಿಗೆ ಆಧಾರದ ಮೇಲೆ ಕಾರ್ಯಕ್ರಮ ಸಂಯೋಜಕರ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಗುತ್ತಿಗೆ ಆಧಾರದ ಮೇಲೆ 01 ಹುದ್ದೆಯನ್ನು ಯೋಜನೆ ಜಾರಿಯಲ್ಲಿರುವರೆಗೆ ಮಾತ್ರ ಗುತ್ತಿಗೆ ಕಾರ್ಯನಿವಹಿಸಬೇಕು. ವಿದ್ಯಾರ್ಹತೆ, ಹೆಚ್ಚುವರಿ ಅರ್ಹತೆಗಳು, ಅನುಭವ ಹಾಗೂ ಉಸ್ತುವಾರಿಯಲ್ಲಿ ಉತ್ತಮ ಕೆಲಸ ನಿರ್ವಹಿಸಬಲ್ಲ, ಕಾರ್ಯಗಾರ, ತರಬೇತಿಯನ್ನು ಹಮ್ಮಿಕೊಳ್ಳಲು ಸಮರ್ಥ, ಕೌಶಲ ಹೊಂದಿರುವ, ಗಣಕಯಂತ್ರ ನಿರ್ವಹಣೆಯಲ್ಲಿ ಪರಿಣಿತಿ, ಕನ್ನಡ ಭಾಷೆಯಲ್ಲಿ ಪರಿಪೂರ್ಣ ಹಿಡಿತವುಳ್ಳ ಹಾಗೂ ಕನಿಷ್ಠ 05 ವರ್ಷ ಸೇವಾ ಅನುಭವ ಅಭ್ಯರ್ಥಿಗಳನ್ನು ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳು, ಅನುಭವ, ಕಂಪ್ಯೂಟರ್ ಜ್ಞಾನ ಆಧಾರದ ಮೇರೆಗೆ ನೇಮಕಾತಿ ಮಾಡಿಕೊಳ್ಳಲಾಗುವುದು. ಸಂಯೋಜಕರ ಹುದ್ದೆಗೆ ಮಾಸಿಕ 19,223 ರೂ.ಗಳ ಗೌರವಧನ ನೀಡಲಾಗುವುದು.

ದಾಖಲೆಗಳು: ನಿಗದಿತ ನಮೂನೆಯಲ್ಲಿ ಅರ್ಜಿ, ಪದವಿ ಅಂಕ ಪಟ್ಟಿ, ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯ ಅಂಕಪಟ್ಟಿಗಳು, ಅನುಭವ ಪ್ರಮಾಣ ಪತ್ರಗಳು, ಕಂಪ್ಯೂಟರ್ ತರಬೇತಿ ಪಡೆದಿರುವ ಬಗ್ಗೆ ಪ್ರಮಾಣ ಪತ್ರ, ತಹಶೀಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರದೊಂದಿಗೆ ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು ಈ ಕಚೇರಿಯಲ್ಲಿ ಪಡೆದು ನವೆಂಬರ್ 20ರೊಳಗಾಗಿ ಅಗತ್ಯ ದಾಖಲಾತಿಗಳೊಂದಿಗೆ ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ಕಚೇರಿ ಸಮಯದಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಅವಧಿ ಮುಗಿದ ನಂತರ ಅಂಚೆ ಮೂಲಕ ಅಥವಾ ನೇರವಾಗಿ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಂತ್ರಾಲಯಂ ರಸ್ತೆ, ಐ.ಡಿ.ಎಸ್.ಎಂ.ಟಿ. ಲೇಔಟ್, ರಾಯಚೂರು–584101ಗೆ ಅಥವಾ ದೂರವಾಣಿ ಸಂಖ್ಯೆ: 08532–295646ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತರಬೇತಿ ಕಾರ್ಯಗಾರ ಇಂದು

**ರಾಯಚೂರು,ನ.12–** ಬೆಂಗಳೂರಿನ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಬಾಲನ್ಯಾಯ (ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015, ಬಾಲ್ಯವಿವಾಹ ನಿಷೇಧ ಕಾಯ್ದೆ–2006, ಪೋಕ್ಸ ಕಾಯ್ದೆ–2012 ಹಾಗೂ ದತ್ತು ನಿಯಾಮವಳಿಗಳು–2022ರ ಕುರಿತು ಒಂದು ದಿನದ ತರಬೇತಿ ಕಾರ್ಯಗಾರವನ್ನು ನವೆಂಬರ್ 13ರ ಬೆಳಿಗ್ಗೆ 9.30ಕ್ಕೆ ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯ ಸಭಾಂಗಣ ಹಮ್ಮಿಕೊಳ್ಳಲಾಗಿದೆ.ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ವೆಂಕಟೇಶ ಅವರು ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಎಂ.ಪುಟ್ಟಮಾದಯ್ಯ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ 1ನೇ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಎಸ್.ಜೆ. ಕುಮಾರಸ್ವಾಮಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಯು. ನವೀನ್ ಕುಮಾರ್, ರಾಯಚೂರಿನ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಸುದರ್ಶನ್, ಪೊಲೀಸ್ ಉಪಾಧೀಕ್ಷಕರು ಹಾಗೂ ಹಿರಿಯ ಮಕ್ಕಳ ಕಲ್ಯಾಣಾಧಿಕಾರಿಗಳಾದ ಶಾಂತವೀರ ಅವರು ಆಗಮಿಸಲಿದ್ದಾರೆ.ಸಂಪನ್ಮೂಲ ವ್ಯಕ್ತಿಯಾಗಿ ಬೆಂಗಳೂರಿನ ಸಿ.ಐ.ಡಿ. ಕಚೇರಿಯ ಪೊಲೀಸ್ ತರಬೇತುದಾರರಾದ ರೋಹಿತ್ ಸಿ.ಜೆ. ಅವರು ಆಗಮಿಸಲಿದ್ದಾರೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಅಮರೇಶ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವ್ಯಾನಿಟಿ ಬ್ಯಾಗ್‌ನಲ್ಲಿದ್ದ 1.11 ಲಕ್ಷ ರೂ.ಮೌಲ್ಯದ ಚಿನ್ನಾಭರಣ ಕಳವು

**ಕಲಬುರಗಿ,ನ.12–**ಮಹಿಳೆಯೊಬ್ಬರ ವ್ಯಾನಿಟಿ ಬ್ಯಾಗ್‌ನಲ್ಲಿದ್ದ 1.11 ಲಕ್ಷ ರೂ.ಮೌಲ್ಯದ ಚಿನ್ನಾಭರಣ ಕಳವಾಗಿರುವ ಘಟನೆ ನಗರದ ಸಿಟಿ ಬಸ್ ನಿಲ್ದಾಣದಲ್ಲಿ ನಡೆದಿದೆ.ನಗರದ ಕೊಠಾರಿ ಭವನ ಹಿಂದುಗಡೆಯ ಮಹಾವೀರ ನಗರದ ಶೋಭಾ ಪಾಟೀಲ ಎಂಬುವವರೆ ಚಿನ್ನಾಭರಣ ಕಳೆದುಕೊಂಡಿದ್ದಾರೆ.ಇವರು ಸಂಬಂಧಿಕರ ಮದುವೆ ಸಮಾರಂಭಕ್ಕೆಂದು ತಮ್ಮ ಊರಿಗೆ ಹೋಗಲು ಆಟೋದಲ್ಲಿ ರೈಲ್ವೆ ಸಿಟಿ ಬಸ್ ನಿಲ್ದಾಣಕ್ಕೆ ಬಂದಿದ್ದಾರೆ. ಈ ವೇಳೆ ಆಟೋ ಚಾಲಕನಿಗೆ ಹಣ ಕೊಡಲೆಂದು ಪಕ್ಕದಲ್ಲಿಯೇ ಇಟ್ಟಿದ್ದ ವ್ಯಾನಿಟಿ ಬ್ಯಾಗನ್ನು ಕಳ್ಳರು ಕಳವು ಮಾಡಿಕೊಂಡು ಹೋಗಿದ್ದಾರೆ. ವ್ಯಾನಿಟಿ ಬ್ಯಾಗ್‌ನಲ್ಲಿ 2010ರಲ್ಲಿ ಖರೀದಿಸಿದ್ದ 37 ಸಾವಿರ ರೂ.ಮೌಲ್ಯದ 20 ಗ್ರಾಂ.ಬಂಗಾರದ ತಾಳಿ, 37 ಸಾವಿರ ರೂ.ಮೌಲ್ಯದ 20 ಗ್ರಾಂ.ಬಂಗಾರದ 4 ಕಿವಿಯೋಲೆ, 37 ಸಾವಿರ ರೂ.ಮೌಲ್ಯದ 20 ಗ್ರಾಂ.ಬಂಗಾರದ ಚೈನ್ ಸೇರಿ 1.11 ಲಕ್ಷ ರೂ.ಮೌಲ್ಯದ ಚಿನ್ನಾಭರಣ ಇದ್ದವು ಎಂದು ತಿಳಿದುಬಂದಿದೆ. ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ತನಿಖೆ ನಡೆದಿದೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H